# ಪ್ರಥಮ ಭಾಷೆ ಕನ್ನಡ

# ೯ ನೆಯ ತರಗತಿ



# ವಾರ್ಷಿಕ ಪಾಠ ಯೋಜನೆ

# ಮತ್ತು

# ಪಾಠ ಟಿಪ್ಪಣಿ



## 2016–17 ನೆಯ ಸಾಲಿನ 9 ನೆಯ ತರಗತಿಯ ವಾರ್ಷಿಕ ಪಾಠ ಯೋಜನೆ.
## ವಿಷಯ : ಪ್ರಥಮ ಭಾಷೆ ಕನ್ನಡ.

| ತಿಂಗಳು | ದೊರೆಯುವ ಅವಧಿಗಳು | ಘಟಕದ ಹೆಸರು | ವಿಷಯಾಂಶಗಳು / ಕಲಿಕಾಂಶಗಳು | ಧಿಗಳುಪಾಠ ಬೋಧನೆಗೆ / ಕಲಿಕೆಗೆ ನಿಗದಿ | ಇಲ್ಲವೇ?ನಿಗದಿಪಡಿಸಿದ ಅವಧಿಯಲ್ಲಿ ಪಾಠ | ಕಾರಣ.ನಿಗದಿಪಡಿಸಿದ ಅವಧಿಯಲ್ಲಿ ಪಾಠ | ಂಗಳುಪಾಠ ಪೂರ್ಣಗೊಳಿಸಲು ಕೈಗೊಂಡ | ಗೃಹಪಾಠ ನೀಡಿದ್ದು. | ಗೃಹಪಾಠ ನೋಡಿದ್ದು. | ವಿಷಯ ಶಿಕ್ಷಕರ ಸಹಿ | ಮುಖ್ಯಶಿಕ್ಷಕರ ಸಹಿ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| **ಜೂನ್ 2016** | **26** | ಕ್ರಮಸೇತುಬಂಧ | 1. ನೈದಾನಿಕ ಪರೀಕ್ಷೆ<br>2. ಪರಿಹಾರ ಬೋಧನೆ<br>3. ಸಾಫಲ್ಯ ಪರೀಕ್ಷೆ | | | | | | | | |
| | | **ಗದ್ಯ ಪಾಠ – 1. ಪಂಥಾಹ್ವಾನ** | 1.1 ಮುನ್ತಯಾರಿ, ಲೇಖಕರ ಪರಿಚಯ, ಪತ್ಯಾಧಾರ ಟಿಪ್ಪಣಿ.<br>1.2 ವಿದ್ಯುಚ್ಚೋರ ರಿಸಿಯ ಸಂಕ್ಷಿಪ್ತ ಕಥೆ.<br>1.3 ವಿದ್ಯುಚ್ಚೋರ ಯಮದಂಡರ ಬಾಲ್ಯ, ವಿದ್ಯಾಭ್ಯಾಸ.<br>1.4 ವನಕ್ರೀಡೆ, ಶಪಥ, ಉದ್ಯೋಗ ಸ್ವೀಕಾರ, ಯಮದಂಡನ ಪದತ್ಯಾಗ.<br>1.5 ಯಮದಂಡನು ಮಿಥಿಳೆಯ ತಳಾರನಾದುದು, ವಿದ್ಯುಚ್ಚೋರನಿಗೆ ಮಾಹಿತಿ, ಮಿಥಿಳೆಯ ಪ್ರವೇಶ, ಕಳ್ಳತನ.<br>1.6 ವೇಣಾತಟದ ದೂತರು ತಂದ ಪತ್ರ, ವಾಮರಥನಿಗೆ ನಂಬಿಕೆ ಉಂಟಾದುದು, ಯೋಗ್ಯ ಪೀಠ ನೀಡಿಕೆ.<br>1.7 ಸಮಗ್ರ ವಾಚನ ಕೌಶಲ ಚಟುವಟಿಕೆ<br>1.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>1.9 ಭಾಷಾಭ್ಯಾಸ – ಪ್ರಾಯೋಗಿಕ ಭಾಷಾ ಚಟುವಟಿಕೆ<br>ಕನ್ನಡ ಸಂಧಿಗಳು – ನಾಮಪದ – ವಿಭಕ್ತಿ ಪ್ರತ್ಯಯಗಳು | | | | | | | | |

| | | | | | | | | | | | |
|---|---|---|---|---|---|---|---|---|---|---|---|
| | | . | 1.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಅಭ್ಯಾಸ<br>1.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>1.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | | | | | | | | |
| **ಜುಲೈ 2016** | **26** | **ಪದ್ಯ ಪಾಠ – 1. ...ಡೆ ಮುನಿವೆಂ** | 2.1 ಮುನ್ನಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ.<br>2.2 ಪೂರ್ವಕಥೆ<br>2.3 ಅಭಯ ರುಚಿ ತನ್ನ ಕಥೆ ಹೇಳಿದ್ದು<br>2.4 ಚಂಡಮಾರಿಯು ಪ್ರತ್ಯಕ್ಷಳಾಗಿ ಜನರನ್ನು ಎಚ್ಚರಿಸಿದ್ದು<br>2.5 ಮಾರಿದತ್ತನಿಗೆ ವೈರಾಗ್ಯ ಉಂಟಾದುದು<br>2.6 ಸಮಗ್ರ ವಾಚನ ಕೌಶಲ ಚಟುವಟಿಕೆ<br>2.7 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>2.8 ಸೈದ್ಧಾಂತಿಕ ಛಂದೋ ಅಭ್ಯಾಸ – ಮಾತ್ರಾ ಗಣ – ಕಂದ ಪದ್ಯ | | | | | | | | |
| | | **ಗದ್ಯ ಪಾಠ – 2. ಪ್ರಾಮಾಣಿಕತೆ** | **3.1** ಮುನ್ನಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ<br>3.2 ಹಮೀದನು ಸಭೆಯಲ್ಲಿ ಭಾಗವಹಿಸಿ ಹುಸೇನನ ಕೊಠಡಿಗೆ ಹೋದದ್ದು, ಕೊಠಡಿಯಲ್ಲಿ ಗೆಳೆಯರಿಬ್ಬರ ಸಂಭಾಷಣೆ.<br>3.3 ರಹೀಮನ ಕಥೆ, ನಿರ್ದೇಶಕರೊಂದಿಗೆ ಅತನ ಅವಾಂತರ.<br>3.4 ಹೊಸನಿರ್ದೇಶಕರ ಆಗಮನ, ಅವರು ರಹೀಮನಿಗೆ ವಹಿಸಿದ ಜವಾಬ್ದಾರಿ<br>3.5 ರಹೀಮನ ಜವಾಬ್ದಾರಿಯಿಂದ ತಪ್ಪಿಸಿಕೊಂಡದ್ದು ಹೊಸ ನಿರ್ದೇಶಕರೊಂದಿಗೆ ಘರ್ಷಣೆ, ಘರ್ಷಣೆಯ ಪರಿಣಾಮ<br>3.6 ಸಮಗ್ರ ವಾಚನ ಕೌಶಲ–ಚಟುವಟಿಕೆ | | | | | | | | |
| **ಜುಲೈ 2016** | | ಣಿಕತೆಗದ್ಯ ಪಾಠ – 2. | **3.9** ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>3.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>3.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | | | | | | | | |
| | | ಪ್ರಜಾನಿಷ್ಠೆ | **ಪಠ್ಯ ಪೋಷಕ ಅಧ್ಯಯನ – ಸ್ವಯಂ ಓದು** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಜುಲೈ 2016** | | **[illegible] ಪದ್ಯ ಭಾಗ = 2.** | **4.1**. ಮುನ್ನುಡಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ.<br>4.2 ಸೂರ್ಯೋದಯ ಸಮಯದ ಆಗಸದ ಸೌಂದರ್ಯ<br>4.3 ಪ್ರಕೃತಿ, ಪರಿಸರದ ಚೆಲುವು<br>4.4 ಸಮಗ್ರ ವಾಚನ ಕೌಶಲ ಚಟುವಟಿಕೆ<br>4.5 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>4.6 ಸೈದ್ಧಾಂತಿಕ ಛಂದೋ ಅಭ್ಯಾಸ – ರೂಪಕಾಲಂಕಾರ, ದೃಷ್ಟಾಂತಾಲಂಕಾರ | | | | | | | | |
| **ಜುಲೈ 2016** | | **[illegible]** | **ಪಠ್ಯ ಪೋಷಕ ಅಧ್ಯಯನ – ಸ್ವಯಂ ಓದು** | | | | | | | | |
| **ಜು** | | | **ರೂಪಣಾತ್ಮಕ ಮೌಲ್ಯಮಾಪನ – 1** | | | | | | | | |
| **ಆಗಸ್ಟ್ 2016** | **25** | **ಗದ್ಯ ಭಾಗ = 3.** | **5**.1 ಮುನ್ನುಡಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ,<br>5.2 ಲೇಖಕರು ಗೆಳೆಯರ ಮನೆ ತಲುಪಿದ್ದು<br>5.3 ಜಯಪುರದ ಬೀದಿಗಳು, ಜನರು ಅವರ ಸ್ವಭಾವ<br>5.4 ಅಂಬೇರಾ ಬೆಟ್ಟದ ಪರಿಸರ<br>5.5 ಕೋಟೆಯ ಅರಮನೆಯ ವರ್ಣನೆ<br>5.6 ಮೀರಾಬಾಯಿಯ ದೇವಾಲಯ ವೀಕ್ಷಣೆ ಹಾಗೂ ಮನೆಗೆ | | | | | | | | |
| **ಆಗಸ್ಟ್ 2016** | | **ಪದ್ಯ ಭಾಗ = 3.** | **6**.1 ಮುನ್ನುಡಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>6.2 ಹಿಮಾದ್ರಿಯಲ್ಲಿ ಹಾಡು ಹಾಡು ಭಯದ ಬೆನ್ನಟ್ಟುವುದು<br>6.3 ಗಂಡೆದೆಯ ಗರ್ಜನೆಗೆ ಕಂಠ ಬೆರೆಯುವುದು, ಹೊಸತು ಹಾಡು<br>6.4 ಸಮಗ್ರ ವಾಚನ ಕೌಶಲ ಚಟುವಟಿಕೆ<br>6.5 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>6.6 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ | | | | | | | | |
| | | | **ರೂಪಣಾತ್ಮಕ ಮೌಲ್ಯಮಾಪನ – 2** | | | | | | | | |
| **ಸೆಪ್ಟೆಂಬರ್ 2016** | **24** | **ಗದ್ಯ ಭಾಗ –4.** | 7.1 ಮುನ್ನುಡಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ,<br>7.2 ಸ್ಟಾಲಿನ್ ಮತ್ತು ರಾಧಾಕೃಷ್ಣನ್ ಮಾತುಕತೆ<br>7.3 ಬಾಲ್ಯ ಮತ್ತು ವಿದ್ಯಾಭ್ಯಾಸ, ವೃತ್ತಿ ಜೀವನ, ಶಿಕ್ಷಕರಾಗಿ ಜನಪ್ರಿಯತೆ,<br>7.4 ಭಾರತದ ಸಂಸ್ಕೃತಿಯನ್ನು ಎತ್ತಿ ಹಿಡಿದುದು, ಧರ್ಮಗಳ ಅಧ್ಯಯನ<br>7.5 ರಾಯಭಾರಿಯಾಗಿ ರಾಷ್ಟ್ರಪತಿಯಾಗಿ ಸಾಧನೆ<br>7.6 ಸಂದ ಗೌರವಗಳು – ರಚಿಸಿದ ಕೃತಿಗಳು | | | | | | | | |

| | | | | | | | | | | | |
|---|---|---|---|---|---|---|---|---|---|---|---|
| ಸೆಪ್ಟೆಂಬರ್ 2016 | | | **ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ** | | | | | | | | |
| 2016ಅಕ್ಟೋಬರ್ | **06** | | **ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ**<br><br>**ಮಧ್ಯಂತರ ರಜಾ ಅವಧಿ** | | | | | | | | |
| ನವೆಂಬರ್ 2016 | **23** | ಪದ್ಯ ಪಾಠ – 4. | **8.1** ಮುನ್ತಯಾರಿ, ಕವಿ ಪರಿಚಯ, ಪತ್ಯಾಧಾರ ಟಿಪ್ಪಣಿ<br>8.2 ಪೂರ್ವ ಕತೆ<br>8.3 ಭರತೇಶನ ಸಾಮರ್ಥ್ಯ ವರ್ಣನೆ<br>8.4 ಆಸ್ಥಾನದಲ್ಲಿ ಭರತೇಶನ ವೈಭವ<br>8.5 ಸಮಗ್ರ ವಾಚನ ಕೌಶಲ ಚಟುವಟಿಕೆ | | | | | | | | |
| 2016ನವೆಂಬರ್ | | ಪುನರಾವರ್ತನೆ | **ಪೋಷಕ ಅಭ್ಯಾಸ – ಸ್ವಯಂ ಓದು –** | | | | | | | | |
| | | ಪೂರಕ.5.ಗದ್ಯ | **9.1** ಮುನ್ತಯಾರಿ, ಕವಿ ಪರಿಚಯ, ಪತ್ಯಾಧಾರ ಟಿಪ್ಪಣಿ<br>9.2 ಸೂತ್ರಧಾರನ ಪ್ರವೇಶ– ಘಟೋತ್ಕಚನು ವಯಸ್ಸಿಗನ ಸಂಸಾರವನ್ನು ಅಡ್ಡಗಟ್ಟಿದ್ದು, ಹೆದರಿದ ಕುಟುಂಬ, ಪಾರಾಗುವ ಬಗೆಯನ್ನು ಕುಟುಂಬವು ಚರ್ಚಿಸಿದ್ದು | | | | | | | | |
| 2016ನವೆಂಬರ್ | | ಪೂರಕ.5.ಗದ್ಯ | 9.9 ಸೈದ್ಧಾಂತಿಕ ಭಾಷಾಭ್ಯಾಸ –<br>ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪರಿಚಯ – ವಿಭಕ್ತಿ ಪಲ್ಲಟ<br>9.10 ಪತ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ | | | | | | | | |
| ಡಿಸೆಂಬರ್ 2016 | **25** | ಪೂರಕ ಪದ್ಯ ಪಾಠ – 5 | 10.1 ಮುನ್ತಯಾರಿ, ಕವಿ ಪರಿಚಯ, ಪತ್ಯಾಧಾರ ಟಿಪ್ಪಣಿ.<br>10.2 ಪೂರಕ ವಿಶೇಷಾಂಶ<br>10.3 ಶ್ರೀಹರಿಯನ್ನು ದಾಸರು ಗುಣಗಾನ ಮಾಡುವ ಬಗೆ<br>10.4 ಬಿದಿರು ತನ್ನ ಬಹು ಬಳಕೆಯನ್ನು ಹೇಳುವ ಬಗೆ<br>10.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>10.6 ಪೋಷಕ / ಪ್ರೇರಣಾ ಅಬ್ಯಾಸ ಚಟುವಟಿಕೆ | | | | | | | | |
| | | ಪುನರಾವರ್ತನೆ | **ಪೋಷಕ ಅಭ್ಯಾಸ – ಸ್ವಯಂ ಓದು** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| ಡಿಸೆಂಬರ್ 2016 | | ಗದ್ಯ ಪಾಠ –6 | 11.1 ಮುನ್ತಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ.<br>11.2 ಪೂರ್ವಕಥೆ<br>11.3 ಮಣಮಂದ ಪುತ್ತೂರಿನ ಉಪವನದಲ್ಲಿ ನಂಬಿಯಣ್ಣ, ಕೈಲಾಸದಲ್ಲಿ ಶಿವ–ಗಿರಿಜೆಯರ ಸಂಭಾಷಣೆ<br>11.4 ವೃದ್ಧ ಮಾಹೇಶ್ವರನಾಗಿ ಶಿವ, ವಿವಾಹ ಮಂಟಪದಲ್ಲಿ ವೃದ್ಧನ ಅವಾಂತರ, ವೃದ್ಧನು ಕಾರಣಿಕ ಪುರುಷನೆಂದು ಜನರು ಭಾವಿಸಿದ್ದು | | | | | | | | |
| | | | 11.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>11.6 ಪೋಷಕ / ಪ್ರೇರಣಾ ಅಬ್ಯಾಸ ಚಟುವಟಿಕೆ<br>11.7 ಸೈದ್ಧಾಂತಿಕ ಭಾಷಾಭ್ಯಾಸ – ಸಂಸ್ಕೃತ ಸಂಧಿಗಳು – ಸವರ್ಣದೀರ್ಘ – ಗುಣ ಸಂಧಿಗಳು ಸಮಾಸ – ಅಂಶಿ ಸಮಾಸ<br>11.8 ಸೈದ್ಧಾಂತಿಕ ಭಾಷಾಭ್ಯಾಸ – | | | | | | | | |
| | | | **ರೂಪಣಾತ್ಮಕ ಮೌಲ್ಯಮಾಪನ – 3** | | | | | | | | |
| 2017ಜನವರಿ | 24 | ಪದ್ಯ ಪಾಠ | 12.1 ಮುನ್ತಯಾರಿ, ಕವಿ ಪರಿಚಯ.<br>12.2 ಪಠ್ಯಾಧಾರ ಟಿಪ್ಪಣಿ<br>12.3 ಪೂರ್ವಕಥೆ<br>12.4 ಹರಿಶ್ಚಂದ್ರ ರಾಜನು ಬೇಟೆಗೆ ಹೊರಟುದು, ಕಾಡುಹಂದಿಯು | | | | | | | | |
| ಜನವರಿ 2017 | | | 12.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>12.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>12.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | | | | | | | | |
| | | ಪುಸ್ತಕ | **ಪಠ್ಯಪೋಷಕ ಅಧ್ಯಯನ – ಸ್ವಯಂ ಓದು** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| ಜನವರಿ 2017 | | ಗದ್ಯ ಪಾಠ –07 ಆತ್ಮಜ್ಞಾನದ ಬೆಳಕು | **13.1** ಮುನ್ನಯಾರಿ, ಲೇಖಕರ ಪರಿಚಯ, ಪತ್ಯಾಧಾರ ಟಿಪ್ಪಣಿ.<br>13.2 ಬಾಲ್ಯದ ಓದು – ಓದುತ್ತಿದ್ದ ತಾಣ, ಓದುವಾಗ ಉಂಟಾದ ಒಂದು ಭಯದ ಸನ್ನಿವೇಶ<br>13.3 ಅಧ್ಯಯನದ ಏಕಾಗ್ರತೆಗೆ ಲೇಖಕರು ಕಂಡುಕೊಂಡ ಉಪಾಯ, ಬೀದಿ ದೀಪದ ಕೆಳಗೆ ಓದು<br>13.4 ದೀಪದ ಕಂಬದಲ್ಲಿ ಆದ ತೊಂದರೆಗಳು– ರಿಪೇರಿ<br>13.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>13.6 ಪೋಷಕ / ಪ್ರೇರಣಾ ಅಬ್ಯಾಸ ಚಟುವಟಿಕೆ<br>13.7 ಸೈದ್ಧಾಂತಿಕ ಭಾಷಾಭ್ಯಾಸ – ವೃದ್ಧಿಸಂಧಿ – ಯಣ್ ಸಂಧಿ – ದ್ವಂದ್ವ ಸಮಾಸ<br>13.8 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>13.9 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>13.10 ರಚನಾತ್ಮಕ ಭಾಷಾ ಚಟುವಟಿಕೆ – ಗಾದೆಗಳ ವಿಸ್ತರಣೆ | | | | | | | | |
| | **24** | | **14.1** ಮುನ್ನಯಾರಿ, ಲೇಖಕರ ಪರಿಚಯ, ಪತ್ಯಾಧಾರ ಟಿಪ್ಪಣಿ | | | | | | | | |
| | | | **15.1** ಮುನ್ನಯಾರಿ, ಪತ್ಯಾಧಾರ ಟಿಪ್ಪಣಿ, ವಿಶೇಷಾಂಶ | | | | | | | | |
| | | | ರೂಪಣಾತ್ಮಕ ಮೌಲ್ಯಮಾಪನ – 4<br>[illegible] | | | | | | | | |
| 017ಮಾರ್ಚ್ | **24** | | **ಪುನರಾವರ್ತನೆ**<br>**ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ** | | | | | | | | |
| 17ಏಪ್ರಿಲ್ | **08** | | **ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ** | | | | | | | | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

# ಉದ್ದೇಶಗಳು

1. ಆಲಿಸುವ ಗ್ರಹಿಸುವ ನಿರರ್ಗಳ ಹಾಗೂ ಸ್ಪಷ್ಟವಾಗಿ ಸ್ವರಭಾರದೊಂದಿಗೆ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
2. ಸೃಜನಶೀಲ ಅಭಿವ್ಯಕ್ತಿ (ಮೌಖಿಕ – ಲಿಖಿತ) ಸಾಮರ್ಥ್ಯವನ್ನು ಬೆಳೆಸುವುದು.
3. ಭಾಷೆಯನ್ನು ದೋಷರಹಿತ ಮತ್ತು ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.
4. ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ, ಅಲಂಕಾರ ಮತ್ತು ಛಂದೋ ಪ್ರಕಾರಗಳನ್ನು ಹಂತಹಂತವಾಗಿ ಸರಳ ರೀತಿಯಲ್ಲಿ ಪರಿಚಯಿಸುವುದು.
5. ಭಾಷೆಯ ಸ್ಪಷ್ಟತೆ ಹಾಗೂ ತಾತ್ತ್ವಿಕವಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಭಾಷಾಂಶ, ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.
6. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥ ಮಾಡಿಕೊಳ್ಳುವುದು.
7. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.
8. ಸೌಂದರ್ಯ/ಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.
9. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.
10. ಕೃತಿ–ಕರ್ತೃವಿನ ವಿಶಿಷ್ಟ ಪರಿಚಯವಾಗುವ ರೀತಿಯಲ್ಲಿ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು ಪರಿಚಯಿಸುವುದು.
11. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.
12. ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.
13. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.
14. ಸಮಕಾಲೀನ ಸಮಸ್ಯೆಗಳನ್ನು ಕುರಿತು ಚಿಂತಿಸಿ ಕಾರಣ ಮತ್ತು ಪರಿಹಾರವನ್ನು ಹುಡುಕುವ ಸಾಮರ್ಥ್ಯವನ್ನು ಬೆಳೆಸುವುದು.
15. ಮಹಿಳಾ ಮತ್ತು ಮಕ್ಕಳ ಹಕ್ಕುಗಳನ್ನು ಅರಿಯುವ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸುವುದು.
16. ಗ್ರಾಮೀಣ ಜೀವನ, ಪ್ರಾದೇಶಿಕತೆ ಹಾಗೂ ಕಲೆಗಳ ಬಗ್ಗೆ ಅರಿವು ಮೂಡಿಸುವುದು.
17. ಪಠ್ಯಪುಸ್ತಕದಲ್ಲಿ ಬರುವ ಸಾಮಾಜಿಕ ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.

**ಕೃಪೆ :– ಪಠ್ಯವಸ್ತು ರಚನಾ ಸಮಿತಿ, ಡಿ. ಎಸ್. ಇ. ಆರ್. ಟಿ., ಬೆಂಗಳೂರು.**

| | | |
|---|---|---|
| **ಪ್ರಥಮ ಭಾಷೆ ಕನ್ನಡ** | **ಘಟಕ – 1** | **9 ನೇ ತರಗತಿ** |
| **ಗದ್ಯಪಾಠ – 1. ಪಂಥಾಹ್ವಾನ (ಹಳಗನ್ನಡ)** | | **ಲೇಖಕರು :– ಶಿವಕೋಟ್ಯಾಚಾರ್ಯ** |

**ಕಲಿಕೆಗೆ ಬೇಕಾದ ಅವಧಿಗಳು :** **ಪ್ರಾರಂಭದ ದಿನಾಂಕ :**

**ಮುಕ್ತಾಯದ ದಿನಾಂಕ :**

**ಕಲಿಕಾಂಶಗಳು :**
1. ಲೇಖಕರಾದ ಶ್ರೀ ಶಿವಕೋಟ್ಯಾಚಾರ್ಯ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. ಕನ್ನಡ ಸಾಹಿತ್ಯದ ಮೊದಲ ಗದ್ಯ ಕಾವ್ಯ 'ವಡ್ಡಾರಾದನೆ'ಯ ಮಹತ್ವವನ್ನು ಅರಿಯುವರು.
3. 'ಯಾವಾಗಲೂ ಸತ್ಯಕ್ಕೆ ಜಯವಾಗುತ್ತದೆ' ಎಂಬ ಸಂದೇಶವನ್ನು ಕುರಿತು ಚರ್ಚಿಸುವರು.
4. ವಿದ್ಯುಚ್ಚೋರ ಮತ್ತು ಯಮದಂಡರ ಬಾಲ್ಯ ಜೀವನದ ಬಗ್ಗೆ ತಿಳಿಯುವರು.

5. ವಿದ್ಯುಚ್ಚೋರ ಮತ್ತು ಯಮದಂಡರ ನಡುವಿನ ಪಂಥಕ್ಕೆ ಕಾರಣವಾದ ಅಂಶಗಳನ್ನು ಚರ್ಚಿಸುವರು.
6. ವಿದ್ಯುಚ್ಚೋರನು ಮಿಥಿಳೆ ಪಟ್ಟಣದಲ್ಲಿ ಕಳ್ಳತನ ಮಾಡಲು ಕಾರಣವಾದ ಅಂಶವನ್ನು ಗುರುತಿಸುವರು.
7. ವಾಮರಥನು ತನ್ನಲ್ಲಿ ಉಂಟಾಗಿದ್ದ ಸಂದೇಹವನ್ನು ಪರಿಹರಿಸಿಕೊಂಡ ಬಗೆಯನ್ನು ಅರ್ಥೈಸುವರು.
8. ಹಳಗನ್ನಡ ಗದ್ಯವನ್ನು ಪದವಿಂಗಡಿಸಿ ಓದುವ ವಿಧಾನವನ್ನು ಅರಿಯುವರು.
9. ಹಳಗನ್ನಡ ವಿಭಕ್ತಿ ಪ್ರತ್ಯಯಗಳನ್ನು ಪರಿಚಯಿಸುವರು.
10. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕಾಲಘಟ್ಟದ ಬಗೆಗೆ ವಿವರಣೆ ನೀಡುವುದು.<br>* ಹಳಗನ್ನಡದ ಮೊದಲ ಗದ್ಯಕಾವ್ಯ 'ವಡ್ಡಾರಾಧನೆ' ಮಹತ್ವವನ್ನು ತಿಳಿಸುವುದು.<br>* ಪೂರ್ವ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು. | * ಕನ್ನಡ ಸಾಹಿತ್ಯ ಚರಿತ್ರೆ ಕೃತಿ. | 1. ಕನ್ನಡದ ಮೊದಲ ಗದ್ಯಕಾವ್ಯ ಯಾವುದು?<br>2. ವಡ್ಡಾರಾಧನೆಯಲ್ಲಿ ಎಷ್ಟು ಕಥೆಗಳಿವೆ?<br>3. ವಡ್ಡಾರಾಧನೆ ಯಾವ ಧರ್ಮಕ್ಕೆ ಸೇರಿದ ಕೃತಿ ಆಗಿದೆ? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಲೇಖಕರಾದ ಶ್ರೀ ಶಿವಕೋಟ್ಯಾಚಾರ್ಯ ಅವರ ಪರಿಚಯ.<br>* ಪದವಿಂಗಡಣೆ ಮಾಡಿ ಉಪಾಧ್ಯಾಯರ ಓದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>* ಉಪಘಟಕಗಳು :–<br>1. ವಿದ್ಯುಚ್ಚೋರ ಮತ್ತು ಯಮದಂಡರ ತಂದೆ – ತಾಯಿಯರ ಪರಿಚಯ, ಬಾಲ್ಯ, ವಿದ್ಯಾಭ್ಯಾಸ. ಗೆಳೆತನ.<br>2. ವಿದ್ಯುಚ್ಚೋರ ಮತ್ತು ಯಮದಂಡರು ಆಟವಾಡಲು ಇಂದ್ರೋಪವನ ಕ್ಕೆ ಹೋದುದು, ಆಟವಾಡುವಾಗ ವಿದ್ಯುಚ್ಚೋರನು ಯಮದಂಡನನ್ನು ಕಂಡು ಹಿಡಿಯಲಾಗದೆ ಕೋಪಗೊಂಡು ಪಂಥ ಕಟ್ಟಿದ್ದು, ಯಮದಂಡನಿಂದ ಪಂಥ ಸ್ವೀಕಾರ.<br>3. ವಿದ್ಯುಚ್ಚೋರನು ರಾಜನಾದುದು, ತಳಾರನಾಗಿದ್ದ ಯಮದಂಡನು ಕಳ್ಳನಾದ ರಾಜನಿಗೆ ಹೆದರಿ ಪಟ್ಟಣ ಬಿಟ್ಟು ಓಡಿಹೋದುದು, ವಿದ್ಯುಚ್ಚೋರನು ಯಮದಂಡನನ್ನು ಹುಡುಕಿಸಿದ್ದು,<br>4. ಯಮದಂಡನು ಮಿಥಿಳೆಯಲ್ಲಿರುವ ವಿಷಯ ತಿಳಿದು ವಿದ್ಯುಚ್ಚೋರನು ಹುಡುಕಿಕೊಂಡು ಹೋಗಿ, ಪಂಥವನ್ನು ಗೆಲ್ಲುವುದಕ್ಕಾಗಿ ಕಳ್ಳತನ ಮಾಡಿ, ಯಮದಂಡನಿಗೆ ದಂಡನೆ ಕೊಡಿಸಿದ್ದು, ಪಂಥಗೆದ್ದ ನಂತರ ಗೆಳೆಯನನ್ನು ಬಂಧನದಿಂದ ಬಿಡಿಸುವ ಸಲುವಾಗಿ | * ವಡ್ಡಾರಾಧನೆ ಮೂಲ ಕೃತಿ<br>* ಪಠ್ಯಪುಸ್ತಕ<br>* ಕನ್ನಡ–ಕನ್ನಡ ನಿಘಂಟು<br>* ತಪಶೀಲು ಪಟ್ಟಿ | 1. ಶಿವಕೋಟ್ಯಾಚಾರ್ಯ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ವಡ್ಡಾರಾಧನೆ ಕೃತಿಗೆ ಇರುವ ಮತ್ತೊಂದು ಹೆಸರೇನು?<br>3. ಕರಪಟ ಶಾಸ್ತ್ರ ಎಂದರೇನು?<br>4. ಸುರಖ ಶಾಸ್ತ್ರ ಎಂದರೇನು?<br>5. 'ಪತ್ತನ' ಪದದ ತತ್ಸಮ ರೂಪ ಯಾವುದು?<br>6. ವೇಣಾತಟ ಪಟ್ಟಣವು ಯಾವ ನದಿಯ ದಡದಲ್ಲಿತ್ತು?<br>7. ವಿದ್ಯುಚ್ಚೋರನ ತಂದೆ ತಾಯಿಯರ ಹೆಸರೇನು?<br>8. ಯಮದಂಡನ ತಂದೆ ತಾಯಿಯರ ಹೆಸರೇನು?<br>9. ವಿದ್ಯುಚ್ಚೋರ ಯಮದಂಡರ ಗುರುಗಳ ಹೆಸರೇನು?<br>10. ವಿದ್ಯುಚ್ಚೋರನು ಕಲಿತ ವಿದ್ಯೆ ಯಾವುದು?<br>11. ಯಮದಂಡನು ಕಲಿತ ವಿದ್ಯೆ ಯಾವುದು?<br>12. ವಿದ್ಯುಚ್ಚೋರನು ಯಮದಂಡನ ಮೇಲೆ ಕೋಪಗೊಳ್ಳಲು ಕಾರಣವೇನು?<br>13. ವಿದ್ಯುಚ್ಚೋರ ಯಮದಂಡರ ನಡುವಿನ ಪಂಥವೇನು?<br>14. ಯಮದಂಡನು ವೇಣಾತಟದ ತಳಾರನ |


ಬಿ. ರವೀಶ್ ಕುಮಾರ್, ಕನ್ನಡ ಭಾಷಾ ಶಿಕ್ಷಕರು, ಸ. ಪ್ರೌ. ಶಾಲೆ, ಕೇರ್ಗಳ್ಳಿ –570026, ಮೈಸೂರು ತಾ॥ ಮತ್ತು ಜಿಲ್ಲೆ. ಸಂಚಾರಿ ವಾಣಿ ಸಂಖ್ಯೆ : 94489 58498

| | | | |
|---|---|---|---|
| | ವಾಮರಥನ ಬಳಿಯಲ್ಲಿ ಸತ್ಯ ಹೇಳುವುದು. ವಾಮರಥನಿಗೆ ಸಂದೇಹ ದೂರವಾದುದು.<br>5. ಹಳಗನ್ನಡ ಪದಗಳಿಗೆ ಹೊಸಗನ್ನಡ ಪದಗಳನ್ನು ಹೇಳಿಸುವುದು.<br>6. ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪರಿಚಯ ಮಾಡುವುದು. | * ಹೊಸಗನ್ನಡ ಹಾಗೂ ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪಟ್ಟಿ | ಕೆಲಸ ಬಿಟ್ಟು ಓಡಿ ಹೋಗಲು ಕಾರಣವೇನು?<br>15. ವಾಮರಥನಿಗಿದ್ದ ಸಂದೇಹ ಹೇಗೆ ದೂರವಾಯಿತು? |
| ಅನ್ವಯ ಚಟುವಟಿಕೆ | 1. ಹಳಗನ್ನಡ ಗದ್ಯಭಾಗವನ್ನು ಪದವಿಂಗಡಿಸಿ ಓದುವ ಅಭ್ಯಾಸ ಮಾಡಿಸುವುದು.<br>2. ಪಠ್ಯಭಾಗದಲ್ಲಿ ಬಂದಿರುವ ಹಳಗನ್ನಡ ವಿಭಕ್ತಿ ಪ್ರತ್ಯಯ ಅಂತ್ಯವುಳ್ಳ ಪದಗಳ ಪಟ್ಟಿ ಮಾಡಿಸುವುದು.<br>3. ಹಳಗನ್ನಡದಲ್ಲಿರುವ ಪಠ್ಯಭಾಗವನ್ನು ಹೊಸಗನ್ನಡಕ್ಕೆ ಪರಿವರ್ತಿಸುವಂತೆ ಮಾಡುವುದು. | * ತಪಶೀಲು ಪಟ್ಟಿ | 1. 'ಪೊಳಲೊಳ್' ಪದದಲ್ಲಿರುವ ವಿಭಕ್ತಿ ಯಾವುದು?<br>2. 'ಪೋಲ್ವುದು' ಪದದ ಹೊಸಗನ್ನಡ ರೂಪವೇನು?<br>3. 'ಪೊಡೆಮಟ್ಟು' ಪದದ ಸಮಾನಾರ್ಥಕ ಪದ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

**ಪ್ರಥಮ ಭಾಷೆ ಕನ್ನಡ ಘಟಕ – 2 9 ನೇ ತರಗತಿ**

**ಪದ್ಯ ಪಾಠ :– 1. ಬಲಿಯನಿತ್ತೊಡೆ ಮುನಿವೆಂ ಕವಿ :– ಶ್ರೀ ಜನ್ನ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ಜನ್ನ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. ಜೈನ ಧರ್ಮದ 'ಅಹಿಂಸಾ ಪರಮೋ ಧರ್ಮಃ' ಎಂಬ ತತ್ತ್ವದ ಮಹತ್ತ್ವವನ್ನು ಅರಿಯುವರು.
3. 'ದೇವಾಲಯಗಳಲ್ಲಿ ಪ್ರಾಣಿಬಲಿ ನೀಡುವುದು' ಅಪರಾಧ ಎಂಬುದನ್ನು ಕುರಿತು ಚರ್ಚಿಸುವರು.
4. ಜನ್ನನ 'ಯಶೋಧರ ಚರಿತೆ' ಕಾವ್ಯದ ಸಂಕ್ಷಿಪ್ತ ಕತೆಯನ್ನು ತಿಳಿಯುವರು.
5. ಅಭಯರುಚಿಯು ಮಾರಿದತ್ತನಿಗೆ ಹೇಳಿದ ಮಾತುಗಳನ್ನು ಸಂಗ್ರಹಿಸುವರು.
6. ಪ್ರತ್ಯಕ್ಷಳಾದ ಚಂಡಮಾರಿ ದೇವತೆಯು ಹೇಳಿದ ಮಾತುಗಳನ್ನು ಅರ್ಥೈಸುವರು.
7. ದೊರೆ ಮಾರಿದತ್ತನಲ್ಲಿ ಉಂಟಾದ ಬದಲಾವಣೆಗಳಿಗೆ ಕಾರಣಗಳನ್ನು ಗುರುತಿಸುವರು.
8. ಮಾತ್ರಾಗಣ – ಕಂದಪದ್ಯದ ಲಕ್ಷಣವನ್ನು ಪರಿಚಯಮಾಡಿಕೊಳ್ಳುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | 1. ಅಹಿಂಸೆಯ ಬಗ್ಗೆ ಬಸವಣ್ಣ ಹಾಗೂ ಗಾಂಧೀಜಿ ಅವರ ಅಭಿಪ್ರಾಯವನ್ನು | * ಬಸವಣ್ಣ ಅವರ ವಚನಗಳು ಹಾಗೂ | 1. 'ಅಹಿಂಸೆ' ಎಂದರೇನು?<br>2. ಜೈನ ಧರ್ಮದ ಮೂಲ |

| | | | |
|---|---|---|---|
| | ತಿಳಿಸುವುದು.<br>2. ಜೈನ ಧರ್ಮದ ಮೂಲ ತತ್ತ್ವ 'ಅಹಿಂಸೆ ಆಚರಿಸುವುದು' ಎಂಬುದನ್ನು ಕುರಿತು ವಿವರಿಸುವುದು.<br>3. 'ಪ್ರಾಣಿಬಲಿ ನೀಡುವುದು ಅಪರಾಧ' ಎಂಬ ವಿಷಯವನ್ನು ಕುರಿತು ಚರ್ಚಿಸುವುದು | ಗಾಂಧೀ ತತ್ತ್ವಗಳು ಕೃತಿ<br>* ಜೈನ ಧರ್ಮದ ಮೂಲ ತತ್ತ್ವಗಳು ಕೃತಿ | ತತ್ತ್ವಗಳು ಯಾವುವು?<br>3. ಪ್ರಾಣಿಬಲಿ ನಿಷೇಧ ಕಾನೂನು ಯಾವಾಗ ಜಾರಿಗೆ ಬಂದಿತು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಕವಿ ಜನ್ನ ಅವರನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪದ್ಯವನ್ನು ಪದವಿಂಗಡಣೆ ಮಾಡಿ, ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪದ್ಯವನ್ನು ಪದ ವಿಂಗಡಣೆ ಮಾಡಿ, ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳ ಮೌನವಾಗಿ ಓದಿ, ಪದ್ಯವನ್ನು ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br><u>ಉಪಘಟಕಗಳು :–</u><br>1. ಅಭಯರುಚಿಯಿಂದ ಸ್ವಪರಿಚಯದ ಮಾತುಗಳು, ಸೆರೆಯಾದ ಬಗೆಗೆ ವಿವರಣೆ, ತಮಗೆ ಈ ಸ್ಥಿತಿ ಬರಲು ಕಾರಣವಾದ ಘಟನೆಯ ಬಗೆಗಿನ ವಿವರಣೆ.<br>2. ಅಭಯರುಚಿಯ ಮಾತುಗಳನ್ನು ಕೇಳಿ ಮಾರಿದತ್ತ ಅಚ್ಚರಿಗೊಳ್ಳುವುದು, ಚಂಡಮಾರಿ ದೇವತೆಯು ಪ್ರತ್ಯಕ್ಷಳಾಗಿ ಇನ್ನು ಮುಂದೆ ತನ್ನನ್ನು ಹೇಗೆ ಪೂಜಿಸಬೇಕು ಎಂದು ತಿಳಿಸಿ ಜನರನ್ನು ಎಚ್ಚರಿಸುವುದು,<br>3. ಮಾರಿದತ್ತನು ತಾನು ಮಾಡಿದ ಪಾಪಗಳಿಗೆ ಪಶ್ಚಾತ್ತಾಪ ಪಡುವುದು, ತನ್ನ ಸೋದರ ಶಿಶುಗಳನ್ನು ಅಪ್ಪಿಮುದ್ದಾಡುವುದು, ತನ್ನ ಮಗನಾದ ಕುಸುಮದತ್ತನಿಗೆ ರಾಜಪದವಿಯನ್ನು ಕೊಡುವುದು, ಜೈನದೀಕ್ಷೆಯನ್ನು ಪಡೆದುದು, ಕೆಲಕಾಲ ಉಗ್ರ ತಪಸ್ಸನ್ನು ಆಚರಿಸುವುದು, ಮೂರನೆಯ ಸ್ವರ್ಗವನ್ನು ಪಡೆದು ದೇವನಾಗುವುದು.<br>4. ಮಾತ್ರಾಗಣಗಳ ಪರಿಚಯ ಮಾಡುವುದು, ಕಂದ ಪದ್ಯದ ಲಕ್ಷಣ ತಿಳಿಸುವುದು. | * ಜನ್ನನ ಕಾಲ್ಪನಿಕ ಚಿತ್ರ<br>* 'ಯಶೋಧರ ಚರಿತೆ'ಆಕರ ಕೃತಿ<br>* ಪಠ್ಯ ಪುಸ್ತಕ<br>* ಕನ್ನಡ – ಕನ್ನಡ ನಿಘಂಟು (ರತ್ನಕೋಶ)<br>ತಪಶೀಲು ಪಟ್ಟಿ<br>ತಪಶೀಲು ಪಟ್ಟಿ<br>ಕಂದ ಪದ್ಯದ ಲಕ್ಷಣವನ್ನು ತಿಳಿಸುವ ಚಾರ್ಟ್ | 1. ಶ್ರೀ ಜನ್ನ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ಜನ್ನ ಅವರು ರಚಿಸಿದ ಕೃತಿಗಳಾವುವು?<br>3. ಶ್ರೀ ಜನ್ನ ಅವರು 'ಕವಿಚಕ್ರವರ್ತಿ' ಬಿರುದನ್ನು ಯಾರಿಂದ ಪಡೆದರು?<br>4. 'ಬಲಿಯನಿತ್ತೊಡೆ ಮುನಿವೆಂ' ಪದ್ಯದ ಆಕರ ಕೃತಿ ಯಾವುದು?<br>5. 'ಸಂಕಲ್ಪಹಿಂಸೆ' ಎಂದರೇನು?<br>6. ಅಭಯರುಚಿಯ ಗುರುಗಳು ಯಾರು?<br>7. ಮಾರಿದತ್ತನು ಯಾವ ಪಟ್ಟಣದ ಅರಸನು?<br>8. ಅಭಯರುಚಿ ಮತ್ತು ಅಭಯಮತಿಯರನ್ನು ಏತಕ್ಕಾಗಿ ಬಂಧಿಸಿ ಕರೆತರಲಾಗಿತ್ತು?<br>9. ಅಭಯರುಚಿಯು ತಲ್ಲಣಗೊಳಲು ಕಾರಣವೇನು?<br>10.ಚಂಡಮಾರಿಯು ಪ್ರತ್ಯಕ್ಷಳಾಗಿ ಏನೆಂದು ಹೇಳಿದಳು?<br>11. ಮಾರಿದತ್ತನು ಯಾರಿಗೆ ಪಟ್ಟವನ್ನು ಕಟ್ಟಿದನು?<br>12. ಮಾರಿದತ್ತನು ಯಾವ ದೀಕ್ಷೆಯನ್ನು ಕೈಗೊಂಡನು?<br>13. ಮಾರಿದತ್ತನಿಗೆ ದೊರೆತ ಸ್ವರ್ಗ ಯಾವುದು?<br>14. ಕಂದ ಪದ್ಯದ ಲಕ್ಷಣ ತಿಳಿಸಿ. |
| ಅನ್ವಯ ಚಟುವಟಿಕೆ | 1. 'ಪ್ರಾಣಿ ಬಲಿ ತಡೆಗಟ್ಟುವಲ್ಲಿ ವಿದ್ಯಾರ್ಥಿಗಳ ಪಾತ್ರ' ಈ ವಿಷಯ ಕುರಿತು ಒಂದು ಪ್ರಬಂಧ ಬರೆಯಿರಿ.<br>2. ಈ ಪದ್ಯದಲ್ಲಿ ಬಂದಿರುವ ಎಲ್ಲ ಕಂದ ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರು ಬರೆಯಿರಿ, | ತಪಶೀಲು ಪಟ್ಟಿ | 1. ನಿಮ್ಮ ಊರಿನಲ್ಲಿ ಯಾವ ಯಾವ ಸಂದರ್ಭದಲ್ಲಿ ಪ್ರಾಣಿ ಬಲಿ ನಡೆಯುತ್ತದೆ ತಿಳಿಸಿ.<br>2. ಪ್ರಾಣಿ ಬಲಿ ತಡೆಗಟ್ಟಲು ನೀವು ಹೇಗೆ ಸಹಕರಿಸುವಿರಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ | * ಪ್ರಶ್ನಾವಳಿ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ |

| | | | |
|---|---|---|---|
| | * ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ　　　　　　　　　　　　　　　　　　　　ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ　　　　　　　　ಘಟಕ – 3.　　　　　　　　9 ನೇ ತರಗತಿ**

**ಗದ್ಯಪಾಠ :– 2. ಪ್ರಾಮಾಣಿಕತೆ　　　　　　　　ಲೇಖಕರು :– ಶ್ರೀಮತಿ ಸಾರಾ ಅಬೂಬಕ್ಕರ್**

ಪಾಠ ಬೋಧನೆಗೆ ಬೇಕಾದ ಅವಧಿಗಳು : 10　　　　　　　　ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಲೇಖಕರಾದ ಶ್ರೀಮತಿ ಸಾರಾ ಅಬೂಬಕ್ಕರ್ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. 'ಬಲಶಾಲಿಗಳು ಬಲಹೀನರನ್ನು ಶೋಷಣೆ ಮಾಡುತ್ತಾರೆ' ಎಂಬ ಅಂಶವನ್ನು ಕುರಿತು ಚರ್ಚಿಸುವರು.
3. ಹಮೀದ್ ಮತ್ತು ಹುಸೇನ್ ಅವರ ಗೆಳೆತನ ಆತ್ಮೀಯವಾದುದು ಎಂಬದನ್ನು ಅರಿಯುವರು.
4. ರಹೀಮನ ಗುಣ ಹಾಗೂ ನಡತೆಗಳನ್ನು ಕುರಿತು ವಿಮರ್ಶಿಸುವುರು.
5. ರಹೀಮನ 'ಪ್ರಾಮಾಣಿಕತೆ' ಇತರರ ದೃಷ್ಟಿಯಲ್ಲಿ ಹೇಗೆ ಕಾಣುತ್ತಿತ್ತು ಎಂಬುದನ್ನು ವಿವರಿಸುವರು.
6. ವಿಭಿನ್ನ ಅಧಿಕಾರಿಗಳ ಮನೋಧೋರಣೆಗಳನ್ನು ಕುರಿತು ತುಲನಾತ್ಮಕವಾಗಿ ವಿಮರ್ಶಿಸುವರು.
7. ಪ್ರಾಮಾಣಿಕತೆಯಿಂದಾಗಿ ರಹೀಮನು ಅನುಭವಿಸಿದ ತೊಂದರೆಗಳನ್ನು ವಿವರಿಸುವರು.
8. 'ಎಷ್ಟೇ ಕಷ್ಟ ಬಂದರೂ ಪ್ರಾಮಾಣಿಕತೆ ಬಿಡಬಾರದು' ಎಂಬುವ ಆದರ್ಶವನ್ನು ತಮ್ಮದಾಗಿಸಿಕೊಳ್ಳುವರು.
9. ಕ್ರಿಯಾಪದದ ಸ್ಥೂಲ ಪರಿಚಯ ಮಾಡಿಕೊಳ್ಳುವರು

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕನ್ನಡದಲ್ಲಿ ಸಣ್ಣಕಥೆಯ ಉಗಮ, ಲಕ್ಷಣ, ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಸುವುದು.<br>* ಕನ್ನಡದ ಸಣ್ಣಕಥೆಗಾರರ ಪರಿಚಯ ಮಾಡುವುದು.<br>* ಜೀವನ ಮೌಲ್ಯಗಳನ್ನು ಕುರಿತು ಚರ್ಚೆ ನಡೆಸುವುದು.<br>* ಲಾಲ್ ಬಹುದ್ದೂರ್ ಶಾಸ್ತ್ರಿ ಅವರ ಪ್ರಾಮಾಣಿಕ ಜೀವನ ಘಟನೆಗಳನ್ನು ತಿಳಿಸುವುದು. | * ವಿಷಯ ಸಂಪದೀಕರಣ ಸಾಹಿತ್ಯ<br>* ಜೀವನ ಮೌಲ್ಯಗಳ ಪಟ್ಟಿ<br>* ಲಾಲ್ ಬಹುದ್ದೂರ್ ಶಾಸ್ತ್ರಿ ಅವರ ಜೀವನ ಚರಿತ್ರೆ | 1. 'ಕನ್ನಡದ ಸಣ್ಣಕಥೆಗಳ ಜನಕ' ಎಂದು ಯಾರನ್ನು ಕರೆಯುತ್ತಾರೆ?<br>2. ಸಣ್ಣಕಥೆ ಪ್ರಕಾರ ಯಾವ ಸಾಹಿತ್ಯದಿಂದ ಪ್ರಭಾವಿತವಾಗಿ ಕನ್ನಡದಲ್ಲಿ ಉಗಮಗೊಂಡಿತು? |
| ಕಲಿಕಾ ಚಟುವಟಿಕೆ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ ಲೇಖಕರಾದ ಶ್ರೀ ಸಾರಾ ಅಬೂಬಕ್ಕರ್ | * ಶ್ರೀಮತಿ ಸಾರಾ ಅಬೂಬಕ್ಕರ್ ಅವರ | 1. ಶ್ರೀಮತಿ ಸಾರಾ ಅಬೂಬಕ್ಕರ್ ಅವರ |

| | | | |
|---|---|---|---|
| | ಅವರ ಪರಿಚಯ ಮಾಡುವ ಚಟುವಟಿಕೆ.<br>* ಉಪಾಧ್ಯಾಯರ ಓದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳಿಂದ ಓದುವ ಚಟುವಟಿಕೆ. ವಿದ್ಯಾರ್ಥಿಗಳಿಂದ ಮೌನ ಓದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಹಮೀದ್ ಮತ್ತು ಹುಸೇನನ ಭೇಟಿ, ಸಾರ್ವಜನಿಕ ಸಮಾರಂಭದ ಭಾಷಣ ಕೇಳುವುದು, ‘ಬಲಶಾಲಿಗಳು ಬಲಹೀನರನ್ನು ಶೋಷಣೆ ಮಾಡುತ್ತಾರೆ’ ಎಂಬ ಧಾರ್ಮಿಕ ಮುಖಂಡರ ಅಭಿಪ್ರಾಯದ ಬಗೆಗೆ ಚರ್ಚೆ, ಹುಸೇನನಿಂದ ತಾನು ಕಂಡ ಸತ್ಯ ಘಟನೆಯ ವಿವರಣೆ.<br>2. ರಹೀಮನ ಉದ್ಯೋಗ, ಪ್ರಾಮಾಣಿಕ ವ್ಯಕ್ತಿತ್ವದ ವರ್ಣನೆ, ನಿರ್ದೇಶಕರಾದ ಚಟರ್ಜಿ ಅವರಿಂದ ಸಾಧ್ಯವಾದರೆ ಕಂಟ್ರಾಕ್ಟರ್‌ಗೆ ಅನುಕೂಲ ಮಾಡಿಕೊಡುವಂತೆ ಸೂಚನೆ, ಪ್ರಾಮಾಣಿಕ ರಹೀಮನಿಂದ ನಿರಾಕರಣೆ, ಅಧಿಕಾರಿಯ ಮಾತನ್ನು ತಿಸ್ಕರಿಸಿದ್ದರಿಂದ ರಹೀಮನಲ್ಲಿ ಉಂಟಾದ ತಳಮಳ.<br>3. ರಹೀಮನಿಗೆ ಬೇಕಾದ ಹೊಸ ಅಧಿಕಾರಿ ಆಗಮನ, ರಹೀಮನ ಮನದಲ್ಲಿದ್ದ ಅಸ್ಥಿರತೆ ಮರೆಯಾದುದು, ಕೇಂದ್ರ ಸರ್ಕಾರದ ವಿಜ್ಞಾನಿಗಳ ಭೇಟಿ ಕಾರ್ಯಕ್ರಮ, ಅವರಿಗೆ ಚೆನ್ನಾಗಿ ಆತಿಥ್ಯ ಮಾಡುವಂತೆ ಅಧಿಕಾರಿಯಿಂದ ರಹೀಮನಿಗೆ ಸೂಚನೆ, ಇಕ್ಕಟ್ಟಿಗೆ ಸಿಲುಕಿದ ರಹೀಮ.<br>4. ರಹೀಮನಿಂದ ತನ್ನ ಸಹಾಯಕನಿಗೆ ಜವಾಬ್ದಾರಿ ವರ್ಗಾವಣೆ ಮಾಡಿ, ರಜೆ ಮೇಲೆ ತೆರಳುವ ನಿರ್ಧಾರ,ಸಹಾಯಕನಿಂದ ಕಂಟ್ರಾಕ್ಟರ್‌ನ ಮೂಲಕ ವಿಜ್ಞಾನಿಗಳಿಗೆ ಅತಿಥಿ ಸತ್ಕಾರ, ನಿರ್ದೇಶಕರಿಂದ ಅತಿಥಿ ಸತ್ಕಾರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡದ್ದಕ್ಕಾಗಿ ಕಾರಣ ಕೇಳಿ ರಹೀಮನ ವಿಚಾರಣೆ, ಇಬ್ಬರ ನಡುವೆ ವಾಗ್ವಾದ, ಕೋಪಗೊಂಡ ರಹೀಮನ ಮಾತುಗಳು, ತನ್ನ ಕಾರ್ಯದ ಬಗೆಗೆ ಸಮರ್ಥನೆ, ಕೋಪಗೊಂಡ ನಿರ್ದೇಶಕರು ರಹೀಮನನ್ನು ದೂರದ ಊರಿಗೆ ವರ್ಗಾವಣೆ ಮಾಡಿದ್ದು, ಕಥೆ ಕೇಳಿದ ಹಮೀದ ದಿಙ್ಮೂಢನಾದುದು.<br>5. ಕ್ರಿಯಾಪದ – ಸಕರ್ಮಕ – ಅಕರ್ಮಕ ಧಾತುಗಳ ಪರಿಚಯ. | ಭಾವಚಿತ್ರ<br>* ಶ್ರೀಮತಿ ಸಾರಾ ಅಬೂಬಕ್ಕರ್ ಅವರ ‘ಚಪ್ಪಲಿಗಳು’ ಕಥಾ ಸಂಕಲನ<br>* ಪಠ್ಯ ಪುಸ್ತಕ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br>* ತಪಶೀಲು ಪಟ್ಟಿ<br>ಪ್ರಶ್ನೆಗಳ ಕಾರ್ಡ್‌ಗಳು<br>ಅವಲೋಕನ ತಪಶೀಲು ಪಟ್ಟಿ<br>* ಸಕರ್ಮಕ – ಅಕರ್ಮಕ ಧಾತುಗಳ ಪಟ್ಟಿ | ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀಮತಿ ಸಾರಾ ಅಬೂಬಕ್ಕರ್ ಅವರ ಕೃತಿಗಳನ್ನು ಹೆಸರಿಸಿ.<br>3. ಶ್ರೀಮತಿ ಸಾರಾ ಅಬೂಬಕ್ಕರ್ ಅವರಿಗೆ ದೊರೆತ ಪ್ರಶಸ್ತಿಗಳಾವುವು?<br>4. ಹಮೀದನ ಗೆಳೆಯನ ಹೆಸರೇನು?<br>5. ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರುಗಳು ಜನರಿಗೆ ಏನು ವಿವರಿಸುತ್ತಿದ್ದರು?<br>6. ಹಮೀದನು ಹುಸೇನನಿಗೆ ಏನೆಂದು ಪ್ರಶ್ನೆ ಕೇಳಿದನು?<br>7. ಹಮೀದನ ಮನದಲ್ಲಿ ಅಸ್ಥಿರತೆ ಉಂಟಾಗಲು ಕಾರಣವೇನು?<br>8. ರಹೀಮನ ವ್ಯಕ್ತಿತ್ವ ಎಂತಹುದು?<br>9. ನಿರ್ದೇಶಕರಾದ ಚಟರ್ಜಿ ರಹೀಮನಿಗೆ ಏನೆಂದು ಹೇಳಿದರು?<br>10. ರಹೀಮನಿಗೆ ಪರಿಚಿತ ನಿರ್ದೇಶಕರು ವಹಿಸಿದ ಕೆಲಸ ಯಾವುದು?<br>11. ರಹೀಮನು ತನಗೆ ವಹಿಸಿದ ಕಾರ್ಯವನ್ನು ತನ್ನ ಸಹಾಯಕನಿಗೆ ವಹಿಸಲು ಕಾರಣವೇನು?<br>12. ರಹೀಮನ ಸಹಾಯಕನು ಯಾರ ಸಹಾಯದಿಂದ ಅತಿಥಿ ಸತ್ಕಾರ ಮಾಡಿದನು?<br>13. ತಾನು ವಹಿಸಿದ ಕಾರ್ಯವನ್ನು ಸರಿಯಾಗಿ ಮಾಡದ ರಹೀಮನಿಗೆ ನಿರ್ದೇಶಕರು ಹೇಗೆ ಪ್ರಶ್ನಿಸಿದರು?<br>14. ಅಧಿಕಾರಿಯ ಮಾತುಗಳಿಂದ ಕೋಪಗೊಂಡ ರಹೀಮನು ಆಡಿದ ಮಾತುಗಳಾವುವು? |
| ಅನ್ವಯ ಚಟುವಟಿಕೆ | 1. ಸಾಮಾಜಿಕ ಮೌಲ್ಯಗಳನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. | | 1. ‘ಕೋಪೋದ್ರಿಕ್ತ’ ಈ ಪದದಲ್ಲಿ ಆಗಿರುವ |


ಬಿ. ರವೀಶ್ ಕುಮಾರ್, ಕನ್ನಡ ಭಾಷಾ ಶಿಕ್ಷಕರು, ಸ. ಪ್ರೌ. ಶಾಲೆ, ಕೇರ್ಗಳ್ಳಿ –570026, ಮೈಸೂರು ತಾ॥ ಮತ್ತು ಜಿಲ್ಲೆ. ಸಂಚಾರಿ ವಾಣಿ ಸಂಖ್ಯೆ : 94489 58498

| | | | |
|---|---|---|---|
| | 2. ನೀವು ಕೇಳಿದ / ಓದಿದ ಪ್ರಾಮಾಣಿಕ ವ್ಯಕ್ತಿಗಳ ಜೀವನದಲ್ಲಿನ ಒಂದು ಘಟನೆಯನ್ನು ತಿಳಿಸಿ.<br>3. 'ನಾನು ಅಧಿಕಾರಿಯಾದರೆ' ಈ ವಿಷಯವನ್ನು ಕುರಿತು 3 ನಿಮಿಷಗಳು ಮಾತನಾಡಿರಿ. (ಆಶು ಭಾಷಣ)<br>4. ಪಠ್ಯಭಾಗದಲ್ಲಿ ಬಂದಿರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿಸುವುದು. | * ತಪಶೀಲು ಪಟ್ಟಿ | ಸಂಧಿ ಯಾವುದು?<br>2. 'ಪ್ರಾಮಾಣಿಕ' ಪದದ ವಿರುದ್ಧಾರ್ಥಕ ಪದ ಯಾವುದು?<br>3. ಕಂಟ್ರಾಕ್ಟರ್' ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 4. 9 ನೇ ತರಗತಿ**

**ಪದ್ಯ ಪಾಠ :– 2. ರಮ್ಯಸೃಷ್ಟಿ (ಆಧುನಿಕ) ಕವಿಗಳು :– ಶ್ರೀ ಮಧುರಚೆನ್ನ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ಮಧುರಚೆನ್ನ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. ಪ್ರಕೃತಿ ವರ್ಣನೆಯುಳ್ಳ ಕವನಗಳನ್ನು ರಚಿಸಿದ ಕವಿಗಳನ್ನು ಹೆಸರಿಸುವರು.
3. ಸೂರ್ಯೋದಯದ ಸಮಯದಲ್ಲಿನ ಪ್ರಕೃತಿ ರಮ್ಯತೆಯನ್ನು ಕುರಿತು ವರ್ಣನೆ ಮಾಡುವರು.
4. ಪ್ರಕೃತಿ ವೈಚಿತ್ರ್ಯಗಳನ್ನು ಕುರಿತು ಚರ್ಚಿಸುವರು.
5. ಕವನದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವರು.
6. ರೂಪಕ ಮತ್ತು ದೃಷ್ಟಾಂತ ಅಲಂಕಾರಗಳ ಪರಿಚಯ ಮಾಡುವರು.
7. ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕುವೆಂಪು ವಿರಚಿತ ಸೂರ್ಯೋದಯ ವರ್ಣನೆಯುಳ್ಳ 'ದೇವರು ರುಜು ಮಾಡಿದನು' ಕವನವನ್ನು ಹಾಡಿಸುವುದು.<br>* ದ. ರಾ. ಬೇಂದ್ರೆ ವಿರಚಿತ 'ಮೂಡಲಮನೆಯ' ಕವನವನ್ನು ಹಾಡಿಸುವುದು.<br>* ವಿದ್ಯಾರ್ಥಿಗಳಿಂದ ಸೂರ್ಯೋದಯ ಸಮಯದ ಪ್ರಕೃತಿ ವೈಚಿತ್ಯವನ್ನು ಕುರಿತು ಸಂವಾದ ನಡೆಸುವುದು. | 'ದೇವರು ರುಜು ಮಾಡಿದನು' ಕವನ<br><br>'ಮೂಡಲ ಮನೆಯ' ಕವನ (ಚಿತ್ರಗೀತೆ ದೃಶ್ಯ)<br><br>ಸೂರ್ಯೋದಯ ಸಮಯದ ಚಿತ್ರ<br><br>ತಪಶೀಲು ಪಟ್ಟಿ | 1. ಸೂರ್ಯನು ಉದಯಿಸುವಾಗ ಯಾವ ಬಣ್ಣದಲ್ಲಿ ಕಾಣುತ್ತಾನೆ?<br>2. ಸೂರ್ಯೋದಯದ ಸಮಯದಲ್ಲಿ ಪಕ್ಷಿಗಳು ಏನು ಮಾಡುತ್ತವೆ?<br>3. ಸೂರ್ಯೋದಯ ಸಮಯದಲ್ಲಿ ಹುಲ್ಲಿನ ಮೇಲೆ ಕುಳಿತ ನೀರಹನಿಗೆ ಏನೆಂದು ಕರೆಯುವರು? |
| ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿಗಳಾದ ಶ್ರೀ ಮಧುರಚೆನ್ನ ಅವರ ಪರಿಚಯ.<br>* ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>* ಪದ್ಯವನ್ನು ಸಾಮೂಹಿಕವಾಗಿ, ಭಾವಪೂರ್ಣವಾಗಿ ಹಾಡಿಸುವುದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ | ಕವಿ ಮಧುರ ಚೆನ್ನ ಅವರ ಭಾವಚಿತ್ರ<br>'ನನ್ನನಲ್ಲ' ಆಕರ ಕೃತಿ<br><br><br>ಪಠ್ಯ ಪುಸ್ತಕ | 1. ಕವಿ ಮಧುರಚೆನ್ನ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಕವಿ ಮಧುರಚೆನ್ನ ಅವರ ಕೃತಿಗಳನ್ನು ಹೆಸರಿಸಿ.<br>3. ಕವಿ ಮಧುರಚೆನ್ನ ಅವರು ಯಾವ ಯಾವ ಭಾಷೆಗಳನ್ನು ಕಲಿತಿದ್ದರು?<br>4. 'ಪೃಥ್ವಿ' ಪದದ ಸಮಾನಾರ್ಥಕ ಪದ |

| | | | |
|---|---|---|---|
| | ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಸೂರ್ಯೋದಯದ ಸಮಯದಲ್ಲಿ ಭಾನು ಭೂಮಿ ಅಪ್ಪಿದಂತೆ ಕಾಣುವುದು.<br>ಬಾನಿನಲ್ಲಿ ಸೂರ್ಯನ ಉದಯ,<br>ನೀಲಗಗನದಲ್ಲಿನ ಮೋಡಗಳ ಚಲನೆ,<br>ಹೊಂಗಿರಣದಿಂದ ನೆಲವು ಬಂಗಾರದ ವರ್ಣ ಹೊಂದುವುದು, ಮರಗಿಡಗಳು, ನೆಲದ ಹಾಸಿನ ಹುಲ್ಲು ಹಚ್ಚಹಸಿರಿನಿಂದ ಕಂಗೊಳಿಸುವುದು, ದನಕರುಗಳು, ಎತ್ತುಗಳು, ಎಮ್ಮೆಗಳು, ಆಡುಗಳು, ಕುರಿಗಳು ಆನಂದ ದಿಂದ ಮೇವನ್ನು ಮೇಯುವುದು, ಬೆಟ್ಟಗುಡ್ಡ, ಹಾದಿಬೀದಿ, ಹೆಣ್ಣುಗಂಡು ಚೆಲುವಾಗಿ ಕಾಣುವುದು, 'ಪ್ರಕೃತಿಯ ವೈಚಿತ್ರ್ಯಕ್ಕೆ ಸರಿಸಾಟಿ ಯಾವುದೂ ಇಲ್ಲ' ಎಂಬ ಅಂಶ.<br>2. ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಗುರುತಿಸುವುದು.<br>3. ರೂಪಕಾಲಂಕಾರವನ್ನು ಪರಿಚಯಿಸುವುದು<br>4. ದೃಷ್ಟಾಂತಾಲಂಕಾರವನ್ನು ಪರಿಚಯಿಸುವುದು. | ನಿಘಂಟು (ರತ್ನಕೋಶ)<br>'ರಮ್ಯಸೃಷ್ಟಿ' ಪದ್ಯದ ಧ್ವನಿಮುದ್ರಿಕೆ<br>ತಪಶೀಲು ಪಟ್ಟಿ<br>ತಪಶೀಲು ಪಟ್ಟಿ | ಯಾವುದು?<br>5. 'ಭೂಮಿ' ಪದದ ತದ್ಭವ ರೂಪ ಯಾವುದು?<br>6. ಸೂರ್ಯೋದಯದ ಸಮಯದಲ್ಲಿ ದೂರದಲ್ಲಿ ಅಪ್ಪಿಕೊಂಡಂತೆ ಕಾಣುವುದು ಯಾವುವು?<br>7. ವಿಭಾಕರನು ಎಲ್ಲಿ ವಿರಾಜಿಪನು?<br>8. ಯಾವುವು ಸೂರ್ಯೋದಯದ ಸಮಯದಲ್ಲಿ ಹಚ್ಚಹಸಿರಾಗಿ ಕಾಣುವುವು?<br>9. ಯಾವುದರ ಚೆಲುವಿಗೆ ಮಿಗಿಲಿಲ್ಲದಾಗಿದೆ?<br>10. 'ಮುಖಕಮಲ' ಇಲ್ಲಿರುವ ಅಲಂಕಾರ ಯಾವುದು? |
| ಅನ್ವಯ ಚಟುವಟಿಕೆ | 1. ಪದ್ಯದ ಸಾರಾಂಶವನ್ನು ಹೇಳಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಪದ್ಯವನ್ನು ರಾಗಪೂರ್ಣವಾಗಿ ಹಾಡುವಂತೆ ತಿಳಿಸುವುದು.<br>4. ಸೂರ್ಯೋದಯದ ವರ್ಣನೆಯುಳ್ಳ ಪ್ರಕೃತಿ ಗೀತೆಗಳನ್ನು ಸಂಗ್ರಹಿಸುವಂತೆ ತಿಳಿಸುವುದು. | ರಮ್ಯಸೃಷ್ಟಿ' ಪದ್ಯದ ವೀಡಿಯೋ ಪ್ರದರ್ಶನ<br>ತಪಶೀಲು ಪಟ್ಟಿ | 1. ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿ?<br>2. 'ಹಚ್ಚಹಸಿರು' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ?<br>3. 'ಮಹಾಕಾಶ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                  ಮುಖ್ಯಶಿಕ್ಷಕರ ಸಹಿ

| ಪ್ರಥಮ ಭಾಷೆ ಕನ್ನಡ | ಘಟಕ – 5. | 9 ನೇ ತರಗತಿ |
|---|---|---|
| ಗದ್ಯಪಾಠ :– 3. ಬೆಡಗಿನ ತಾಣ ಜಯಪುರ | | ಲೇಖಕರು :– ಶ್ರೀ ಶಿವರಾಮ ಕಾರಂತ |

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಲೇಖಕರಾದ ಶ್ರೀ ಶಿವರಾಮ ಕಾರಂತ ಅವರ ಪರಿಚಯ ಮಾಡುವರು.
2. 'ಪ್ರವಾಸ ಕಥನ'ದ ಲಕ್ಷಣ, ವಿಧಗಳು ಹಾಗೂ ಪ್ರಸಿದ್ಧ ಪ್ರವಾಸ ಕಥನಕಾರರ ಬಗೆಗೆ ಅರಿವು ಮೂಡಿಸಿಕೊಳ್ಳುವರು.
3. ಜಯಪುರ ನಗರದ ಮುಖ್ಯಬೀದಿಗಳು, ಅಂಗಡಿ ಹಾಗೂ ಮನೆಗಳ ದೇಶೀ ವಾಸ್ತುರಚನಾ ಶೈಲಿ ಬಗೆಗೆ ತಿಳಿಯುವರು.
4. 'ಜಯಪುರದ ಜನರು ಬಣ್ಣದ ಮೋಹವುಳ್ಳವರು' ಎಂಬ ಲೇಖಕರ ಹೇಳಿಕೆಯನ್ನು ವಿಶ್ಲೇಷಿಸುವರು.
5. 'ಅಂಬೇರ' ಪ್ರದೇಶದ ಸುತ್ತಮುತ್ತಲಿನ ವಾತಾವರಣವನ್ನು ಪರಿಚಯಿಸುವರು.
6. 'ಅಂಬೇರದ ಅರಮನೆ ರಜಪೂತ ಅರಸುಗಳ ರಸಿಕ ಜೀವನದ ದ್ಯೋತಕ' ಎಂಬ ಅಂಶವನ್ನು ಕುರಿತು ಚರ್ಚಿಸುವರು.
7. 'ಜಂತ್ರಮಂತ್ರ'ದ ವಿಶೇಷತೆಯನ್ನು ಕುರಿತು ವರ್ಣಿಸುವುದರ ಮೂಲಕ ಹಳೆಯ ಕಾಲದ ವೈಜ್ಞಾನಿಕ ಚಿಂತನೆಯನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸುವರು.
8. ಜಯಪುರದ ಪ್ರಾದೇಶಿಕ ಜನಪದ ನೃತ್ಯದ ವಿಶೇಷತೆಯನ್ನು ಗಮನಿಸುವರು.
9. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ ಹಾಗೂ ಆನಂದಕ್ಕಾಗಿ ಪ್ರವಾಸ ಕಥನ ಲೇಖನಗಳನ್ನು ಓದುವ / ಬರೆಯುವ ಹವ್ಯಾಸ / ಅಭಿರುಚಿಯನ್ನು ರೂಢಿಸಿಕೊಳ್ಳುವುದು.
10. ಕರ್ತರಿ ಮತ್ತು ಕರ್ಮಣಿ ಪ್ರಯೋಗ ವಾಕ್ಯಗಳನ್ನು ಪರಿಚಯಿಸುವರು.
11. ಕ್ರಿಯಾಪದದ ಅರ್ಥರೂಪಗಳನ್ನು ಪರಿಚಯಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | 1. ಪ್ರವಾಸ ಕಥನದ ಲಕ್ಷಣ, ವಿಧಗಳ ಪರಿಚಯ, ಪ್ರಸಿದ್ಧ ಪ್ರವಾಸ ಕಥನಗಳು ಹಾಗೂ ರಚನಾಕಾರರ ಪರಿಚಯ.<br>2. ವಿದ್ಯಾರ್ಥಿಗಳು ನಡೆಸಿದ ಪ್ರವಾಸವನ್ನು ಕುರಿತು ಸಂವಾದ ನಡೆಸುವುದು.<br>3. ಜ್ಞಾನ ಸಂಪಾದನೆಗೆ ಪ್ರವಾಸದಿಂದ ಆಗುವ ಪ್ರಯೋಜನಗಳನ್ನು ಕುರಿತು ಪಟ್ಟಿ ಮಾಡಿಸುವುದು. | ವಿಷಯ ಸಂಪದೀಕರಣ ಸಾಹಿತ್ಯ.<br>ಪ್ರಸಿದ್ಧ ವ್ಯಕ್ತಿಗಳ ಪ್ರವಾಸ ಕಥನಗಳು<br>ತಪಶೀಲು ಪಟ್ಟಿ | 1. ಪ್ರವಾಸ ಕಥನ ಎಂದರೇನು?<br>2. ಪ್ರವಾಸ ಕಥನದ ವಿಧಗಳಾವುವು?<br>3. ಕನ್ನಡದ ಮೊದಲ ಪ್ರವಾಸ ಕಥನ ಯಾವುದು? |
| ಕಲಿಕೆಯ ಚಟುವಟಿಕೆ | ಪ್ರಶ್ನೋತ್ತರ ವಿಧಾನದಿಂದ ಲೇಖಕರಾದ ಶ್ರೀ ಶಿವರಾಮ ಕಾರಂತ ಅವರ ಪರಿಚಯ.<br>ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಶ್ರೀ ಶಿವರಾಮ ಕಾರಂತ ಅವರು ಗೆಳೆಯ ಶ್ರೀಪತಿಯೊಡನೆ ಜಯಪುರಕ್ಕೆ ಭೇಟಿ ನೀಡಿದ್ದು, ಆತಿಥ್ಯ | * ಶ್ರೀ ಶಿವರಾಮ ಕಾರಂತ ಅವರ ಭಾವಚಿತ್ರ<br>* ಶ್ರೀ ಶಿವರಾಮ ಕಾರಂತ ಅವರ 'ಅಬುವಿನಿಂದ ಬರಾಮಕ್ಕೆ' ಪ್ರವಾಸ ಕಥನ<br>* ಪಠ್ಯ ಪುಸ್ತಕ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ) | 1. ಶ್ರೀ ಶಿವರಾಮ ಕಾರಂತ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ಶಿವರಾಮ ಕಾರಂತ ಅವರ ಕೃತಿಗಳನ್ನು ಪಟ್ಟಿ ಮಾಡಿರಿ.<br>3. ಶ್ರೀ ಶಿವರಾಮ ಕಾರಂತ ಅವರಿಗೆ ದೊರೆತ ಪ್ರಶಸ್ತಿಗಳಾವುವು?<br>4. 'ಬೆಡಗಿನ ತಾಣ ಜಯಪುರ' ಗದ್ಯಪಾಠದ ಆಕರ ಕೃತಿ ಯಾವುದು?<br>5. ಶ್ರೀ ಶಿವರಾಮ ಕಾರಂತರೊಡನೆ ಪ್ರವಾಸಕ್ಕೆ ಹೋಗಿದ್ದ ಗೆಳೆಯರ ಹೆಸರೇನು? |

| | | | |
|---|---|---|---|
| | ನೀಡಿದ ಗೆಳೆಯ ರೈ ಅವರ ಮನೆಯ ಪರಿಸರ, ಅಂಬೇರ ನೋಡಲು ಹೋದ ವಿಧಾನ, ಜಯಪುರದ ಮುಖ್ಯಬೀದಿಗಳ ವರ್ಣನೆ, ಜಯಪುರದ ಜನರು ಬಣ್ಣಗಳ ಮೋಹಿಗಳು ಎಂಬ ಲೇಖಕರ ಅಭಿಪ್ರಾಯದ ಬಗೆಗೆ ಚರ್ಚೆ.<br>2. ಅಂಬೇರದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯದ ವರ್ಣನೆ, ಅಂಬೇರ ಅರಮನೆಯ ವಾಸ್ತು ರಚನಾ ಶೈಲಿಯ ವರ್ಣನೆ, ಅಂಬೇರ ಅರಮನೆ ರಜಪೂತ ಅರಸರುಗಳ ರಸಿಕ ಜೀವನದ ದ್ಯೋತಕ ಎಂಬ ಲೇಖಕರ ಅಭಿಪ್ರಾಯದ ಬಗೆಗೆ ಚರ್ಚೆ.<br>3. ಮೀರಾಬಾಯಿ ದೇವಾಲಯದ ವರ್ಣನೆ, 'ಜಂತ್ರಮಂತ್ರ' ವಿಶೇಷತೆ ಕುರಿತು ಚರ್ಚೆ, ಜಯಪುರದ ಪ್ರಾದೇಶಿಕ ಜನಪದ ನೃತ್ಯದ ವಿಶೇಷತೆ, ಲೇಖಕರ ಮುಂದಿನ ಪ್ರಯಾಣ.<br>4. ಕರ್ತರಿ ಮತ್ತು ಕರ್ಮಣಿ ಪ್ರಯೋಗದ ಪರಿಚಯ. ಕ್ರಿಯಾ ಪದದ ಅರ್ಥರೂಪಗಳ ಪರಿಚಯ. | * ತಪಶೀಲು ಪಟ್ಟಿ<br>* ಜಯಪುರದ ವಿವಿಧ ತಾಣಗಳು ಹಾಗೂ ಕಟ್ಟಡಗಳ ಚಿತ್ರ / ವೀಡಿಯೋ ಪ್ರದರ್ಶನ<br>* ಪ್ರಶ್ನೆಗಳ ಕಾರ್ಡ್‌ಗಳು<br>* ಅವಲೋಕನ ತಪಶೀಲು ಪಟ್ಟಿ | 6. ಜಯಪುರದ ಮುಖ್ಯಬೀದಿಗಳು ಹೇಗೆ ಕಾಣುತ್ತಿದ್ದವು?<br>7. ಜಯಪುರ ಬಣ್ಣಗಳ ತವರೂರು ಏಕೆ?<br>8. ಅಂಬೇರ ಅರಮನೆಯ ಮೊದಲ ಅಂತಸ್ತಿನಲ್ಲಿ ಏನಿದೆ?<br>9. ಅಂಬೇರ ಅರಮನೆಯ ಮೂರನೆಯ ಅಂತಸ್ತಿನಲ್ಲಿ ಏನಿದೆ?<br>10.' ಜಂತ್ರಮಂತ್ರ' ಎಂದರೆ ಏನು?<br>11. ಜಯಪುರದ ಜನಪದ ನೃತ್ಯದ ವಿಶೇಷತೆ ಏನು?<br>12. ಕರ್ಮಣಿ ಪ್ರಯೋಗಕ್ಕೆ ಒಂದು ಉದಾಹರಣೆ ಕೊಡಿ. |
| ಅನ್ವಯ ಚಟುವಟಿಕೆ | 1. ವಿದ್ಯಾರ್ಥಿಗಳು ಭೇಟಿ ನೀಡಿದ ಸ್ಥಳಗಳ ಮಹತ್ತ್ವವನ್ನು ತಿಳಿಸಿ, ಪ್ರವಾಸ ಕಥನ ಬರಯುವಂತೆ ಸೂಚಿಸುವುದು.<br>2. ಅಂಬೇರ ಅರಮನೆಯ ಚಿತ್ರಗಳನ್ನು ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು.<br>3. ಪ್ರಸಿದ್ಧ ಪ್ರವಾಸ ಸ್ಥಳಗಳ ಬಗೆಗೆ ಮಾಹಿತಿ ಸಂಗ್ರಹಿಸುವಂತೆ ತಿಳಿಸುವುದು. | * ತಪಶೀಲು ಪಟ್ಟಿ<br>* ವಿವಿಧ ಪತ್ರಿಕೆಗಳಲ್ಲಿನ ಪ್ರವಾಸ ಲೇಖನಗಳು | 1. ಮೈಸೂರು ಅರಮನೆಯ ವಿಶೇಷತೆಯನ್ನು ಕುರಿತು ಪ್ರಬಂಧ ಬರೆಯಿರಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                        ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ          ಘಟಕ – 6.          9 ನೇ ತರಗತಿ**

**ಪದ್ಯ ಪಾಠ :– 3. ಹೊಸಹಾಡು          ಕವಿಗಳು :– ಶ್ರೀ ಕಯ್ಯಾರ ಕಿಞ್ಞಣ್ಣ ರೈ**

ಪಾಠ ಬೋಧನೆಗೆ ಬೇಕಾದ ಅವಧಿಗಳು :          ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು : 1. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.

2. ನವೋದಯ ಕಾಲದ ಕವಿಗಳನ್ನು ಹೆಸರಿಸುವರು.
3. 'ಹಾಡು ಪ್ರಕೃತಿಯ ಅವಿಭಾಜ್ಯ ಅಂಗ' ಎಂಬುದನ್ನು ವಿವರಿಸುವರು.
4. ಹಾಡು 'ಹಳೆಯ ಮೌಢ್ಯಗಳನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲದು' ಎಂಬುದನ್ನು ಕುರಿತು ಚರ್ಚಿಸುವರು.
5. ಕವನದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವರು.
6. ಕವನದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸುವರು.
7. ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಗೋಪಾಲಕೃಷ್ಣ ಅಡಿಗ ವಿರಚಿತ 'ಕಟ್ಟುವೆವು ನಾವು ಹೊಸ ನಾಡೊಂದನು' ಕವನವನ್ನು ಹಾಡಿಸುವುದು.<br>* ಆಧುನಿಕ ಕನ್ನಡ ಸಾಹಿತ್ಯದ 'ನವೋದಯ' ಕಾಲದ ಸಾಹಿತ್ಯ ರಚನೆಯ ಬಗೆಗೆ ಚರ್ಚಿಸುವುದು.<br>* ನವೋದಯ ಕಾಲದ ಪ್ರಮುಖ ಕವಿಗಳ ಹೆಸರನ್ನು ಪಟ್ಟಿ ಮಾಡಿಸುವುದು | 'ಕಟ್ಟುವೆವು ನಾವು ಹೊಸ ನಾಡೊಂದನು' ಕವನ<br><br>ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ<br><br>ತಪಶೀಲು ಪಟ್ಟಿ | 1. ನವೋದಯ ಕಾಲದ ಆರಂಭದ ಕೃತಿ ಯಾವುದು?<br>2. ನವೋದಯ ಕಾಲದ ಕವಿಗಳು ಯಾವ ದೇಶದ ಕಾವ್ಯದಿಂದ ಪ್ರೇರಣೆ ಪಡೆದರು?<br>3. ನವೋದಯ ಕಾಲದ ಪ್ರಮುಖ ಕವಿಗಳನ್ನು ಹೆಸರಿಸಿ. |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿಗಳಾದ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರ ಪರಿಚಯ.<br>* ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>* ಪದ್ಯವನ್ನು ಸಾಮೂಹಿಕವಾಗಿ, ಭಾವಪೂರ್ಣವಾಗಿ ಹಾಡಿಸುವುದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ನಾವಾಡುವ ಹೊಸ ಹಾಡು ನವಭಾವ, ನವ ಜೀವನ, ನವಶಕ್ತಿ ತುಂಬಿರುವ ವೀರಧ್ವನಿಯಾಗಿರಬೇಕು ಹಾಗೂ ಜಾತಿ, ಕುಲ, ಮತ, ಧರ್ಮ ಪಾಶಗಳನ್ನು ಕಡಿದೊಗೆದು ವಿಶ್ವದೆಲ್ಲೆಡೆ ಗುಡುಗಬೇಕು ಎಂಬ ಕವಿಯ ಭಾವವನ್ನು ಅರ್ಥೈಸುವುದು.<br>2. ನಾವಾಡುವ ಹೊಸ ಹಾಡು ಭಾರತದ ಹಿಮಾಲಯದ ಎತ್ತರದಲ್ಲಿ, ದಶದಿಕ್ಕಿನಲ್ಲಿ ಹರಡಿ ಭಯದ ಬೆನ್ನಟ್ಟಬೇಕು ಹಾಗೂ ಮೂವತ್ತು ಮೂರು ಕೋಟಿ ಭಾರತೀಯರ ಒಕ್ಕೊರಲಿನ ಕಲರವ ಮೂಲೋಕಗಳಲ್ಲೂ ಪ್ರತಿಧ್ವನಿಗೊಳ್ಳಬೇಕು ಎಂಬ ಕವಿಯ ಭಾವವನ್ನು ಕುರಿತು ಚರ್ಚಿಸುವುದು.<br>3. ನಾವಾಡುವ ಹೊಸಹಾಡು ವೀರ ಅಟ್ಟಹಾಸದಲ್ಲಿ ಬಾನು ಬುವಿ ಬೆಳಗಿ, ಕ್ರಾಂತಿಕಿಡಿ ಹಚ್ಚಬೇಕು ಹಾಗೂ ನಮ್ಮ ಸಂಕಷ್ಟದ ದಿನಗಳನ್ನು ಮರೆಯಿಸುವಂತಹ ಹೊಸತಾಗಬೇಕು ಎಂಬ ಕವಿಯ ಭಾವವನ್ನು ವಿವರಿಸುವುದು.<br>4. ಪ್ರಸ್ತುತ ಕವನದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿಸುವುದು.<br>5. ಪ್ರಸ್ತುತ ಕವನದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸುವುದು. | ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಭಾವಚಿತ್ರ<br>'ಶತಮಾನದ ಗಾನ' ಕವನ ಸಂಕಲನ (ಆಕರ ಕೃತಿ)<br><br>ಪಠ್ಯ ಪುಸ್ತಕ<br><br>ನಿಘಂಟು (ರತ್ನಕೋಶ)<br><br>ತಪಶೀಲು ಪಟ್ಟಿ<br><br>ತಪಶೀಲು ಪಟ್ಟಿ | 1. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರ ಕೃತಿಗಳನ್ನು ಪಟ್ಟಿ ಮಾಡಿ.<br>3. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರಿಗೆ ಬಂದ ಪ್ರಶಸ್ತಿಗಳನ್ನು ಹೆಸರಿಸಿ.<br>4. 'ಹೊಸಹಾಡು' ಕವನದ ಆಕರ ಕೃತಿ ಯಾವುದು?<br>5. ನಾವು ಎಂತಹ ಹಾಡನ್ನು ಒಮ್ಮೆ ಹಾಡಬೇಕು ಎಂದು ಕವಿಗಳು ಹೇಳುತ್ತಾರೆ?<br>6. ನಾವಾಡುವ ಹೊಸಹಾಡು ಯಾವುದನ್ನು ಕಡಿದೊಗೆಯಬೇಕು ಎಂದು ಕವಿಗಳು ಹೇಳುತ್ತಾರೆ?<br>7. ಯಾವುದು ದಶದಿಕ್ಕಿನಲ್ಲಿ ಹಾರಿ ಭಯದ ಬೆನ್ನಟ್ಟಬೇಕು ಎಂದು ಕವಿಗಳು ಹೇಳುತ್ತಾರೆ?<br>8. ನಾವಾಡುವ ಹೊಸಹಾಡು ಎಲ್ಲೆಲ್ಲಿ ಮಾರ್ದನಿಗೊಳ್ಳಬೇಕು ಎಂದು ಕವಿಗಳು ಹೇಳುತ್ತಾರೆ?<br>9. ಪ್ರಸ್ತುತ ಕವನದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿರಿ.<br>10. 'ಹಾಡೊಮ್ಮೆ' ಪದದಲ್ಲಿ ಆಗಿರುವ ಸಂಧಿ ಯಾವುದು?<br>11. 'ಉನ್ನತೋನ್ನತ' ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ ಆಗಿದೆ? |
| ಅನ್ವಯ | 1. ಪದ್ಯದ ಸಾರಾಂಶವನ್ನು ಹೇಳಿಸುವುದು. | | 1. 'ಮಾರ್ದನಿ' ಪದದ |

| | | | |
|---|---|---|---|
| ಚಟುವಟಿಕೆ | 2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಪದ್ಯವನ್ನು ಸಾಮೂಹಿಕವಾಗಿ ಹಾಡಿಸುವುದು.<br>4. ಕಂಠಪಾಠಕ್ಕೆ ನಿಗದಿಪಡಿಸಿರುವ ಭಾಗವನ್ನು ಹೇಳಿಸುವುದು. | ತಪಶೀಲು ಪಟ್ಟಿ | ಸಮಾನಾರ್ಥಕ ಪದ ತಿಳಿಸಿ.<br>2. 'ಉನ್ನತೋನ್ನತ' ಪದದಲ್ಲಿ ಆಗಿರುವ ಸಂಧಿ ಯಾವುದು?<br>3. 'ಮೂಕೋಟಿ' ಪದದಲ್ಲಿ ಆಗಿರುವ ಸಮಾಸ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

**ಪ್ರಥಮ ಭಾಷೆ ಕನ್ನಡ ಘಟಕ – 7. 9 ನೇ ತರಗತಿ**
**ಗದ್ಯಪಾಠ :– 4. ರಾಧಾಕೃಷ್ಣನ್ ಪಠ್ಯ ಪುಸ್ತಕ ಸಮಿತಿಯ ರಚನೆ**

ಪಾಠ ಬೋಧನೆಗೆ ಬೇಕಾದ ಅವಧಿಗಳು : 10 ಪ್ರಾರಂಭದ ದಿನಾಂಕ :
ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ವ್ಯಕ್ತಿಚಿತ್ರ / ಆತ್ಮ ಚರಿತ್ರೆ / ಜೀವನ ಚರಿತ್ರೆ ಸಾಹಿತ್ಯ ಪ್ರಕಾರಗಳ ಬಗೆಗೆ ಅರಿವು ಮೂಡಿಸಿಕೊಳ್ಳುವರು.
2. ಡಾ. ರಾಧಾಕೃಷ್ಣನ್ ಹಾಗೂ ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರ ಭೇಟಿಯ ಸಂದರ್ಭವನ್ನು ಕುರಿತು ವಿವರಿಸುವರು.
3. ಡಾ. ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸದ ಬಗೆಗೆ ಅರಿವು ಮೂಡಿಸಿಕೊಳ್ಳುವರು.
4. ಡಾ. ರಾಧಾಕೃಷ್ಣನ್ ಅವರ ವೃತ್ತಿ ಜೀವನ ಕುರಿತು ವರ್ಣಿಸುವರು.
5. ಡಾ. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡಿಗೆ ಕಾರ್ಯಕ್ರಮದ ಮಹತ್ವವನ್ನು ಅರಿಯುವರು.
6. ಡಾ. ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ತ್ವ ಶಾಸ್ತ್ರದ ಬಗೆಗೆ ನೀಡಿದ ಹೇಳಿಕೆಗಳನ್ನು ವಿಮರ್ಶಿಸುವರು.
7. ಡಾ. ರಾಧಾಕೃಷ್ಣನ್ ಅವರು ತಮ್ಮ ಬಹುಮುಖ ಪ್ರತಿಭೆಯಿಂದ ನಿರ್ವಹಿಸಿದ ವಿವಿಧ ಹುದ್ದೆಗಳ ಬಗೆಗೆ ಚರ್ಚಿಸುವರು.
8. ಡಾ. ರಾಧಾಕೃಷ್ಣನ್ ಅವರಿಗೆ ದೊರೆತ ಪ್ರಶಸ್ತಿ ಪುರಸ್ಕಾರಗಳನ್ನು ಹೆಸರಿಸುವರು.
9. ಡಾ. ರಾಧಾಕೃಷ್ಣನ್ ಅವರು ರಚಿಸಿದ ಕೃತಿಗಳನ್ನು ಪಟ್ಟಿ ಮಾಡುವರು.
10. ಕಾಲರೂಪ ಕ್ರಿಯಾಪದಗಳ ಬಗೆಗೆ ಪರಿಚಯ ಮಾಡಿಕೊಳ್ಳುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ | 1. ವ್ಯಕ್ತಿಚಿತ್ರ / ಆತ್ಮ ಚರಿತ್ರೆ / ಜೀವನ ಚರಿತ್ರೆ ಸಾಹಿತ್ಯ | | 1. ಆತ್ಮ ಚರಿತ್ರೆ ಹಾಗೂ ಜೀವನ |

| | | | |
|---|---|---|---|
| ಚಟುವಟಿಕೆ | ಪ್ರಕಾರಗಳ ನಡುವಿನ ವ್ಯತ್ಯಾಸಗಳನ್ನು ಮನದಟ್ಟು ಮಾಡುವುದು.<br>2. ಪ್ರಮುಖ ವ್ಯಕ್ತಿಚಿತ್ರ / ಆತ್ಮ ಚರಿತ್ರೆ / ಜೀವನ ಚರಿತ್ರೆ ಸಾಹಿತ್ಯ ಕೃತಿಗಳು ಹಾಗೂ ರಚನಕಾರರ ಹೆಸರನ್ನು ಪಟ್ಟಿ ಮಾಡಿವುದು.<br>3. ಭಾರತದ ರಾಷ್ಟ್ರಪತಿಗಳ / ಉಪರಾಷ್ಟ್ರಪತಿಗಳ ಚಿತ್ರ ಹಾಗೂ ಆಡಳಿತಾವಧಿಯ ಪಟ್ಟಿ ತಯಾರಿಸುವುದು.<br>4. ರಾಧಾಕೃಷ್ಣನ್ ಕುರಿತ ಸಾಕ್ಷ್ಯ ಚಿತ್ರ ವಿಡಿಯೋ ಪ್ರದರ್ಶನ | ವಿಷಯ ಸಂಪದೀರಣ ಸಾಹಿತ್ಯ<br>ಭಾರತದ ರಾಷ್ಟ್ರಪತಿಗಳು / ಉಪರಾಷ್ಟ್ರಪತಿಗಳ ಭಾವಚಿತ್ರಗಳು<br>ರಾಧಾಕೃಷ್ಣನ್ ಕುರಿತ ಸಾಕ್ಷ್ಯ ಚಿತ್ರ | ಚರಿತ್ರೆಗಳಿಗೆ ಇರುವ ವ್ಯತ್ಯಾಸವೇನು?<br>2. ಗಾಂಧೀಜಿ ಅವರ ಆತ್ಮ ಚರಿತ್ರೆಯ ಹೆಸರೇನು?<br>3. ಕನ್ನಡ ಪ್ರಮುಖ ವ್ಯಕ್ತಿಚಿತ್ರ / ಆತ್ಮ ಚರಿತ್ರೆ / ಜೀವನ ಚರಿತ್ರೆ ಸಾಹಿತ್ಯ ಕೃತಿಗಳು ಹಾಗೂ ರಚನಕಾರರ ಹೆಸರನ್ನು ತಿಳಿಸಿ. |
| ಕಲಿಕೆಯ ಚಟುವಟಿಕೆ | ಪ್ರಶ್ನೋತ್ತರ ವಿಧಾನದಿಂದ ಆಕರ ಕೃತಿಗಳ ಪರಿಚಯ ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ರಾಧಾಕೃಷ್ಣನ್ ಅವರ ಬಗ್ಗೆ ಸ್ಟಾಲಿನ್ ಹೇಳಿದ ಮಾತುಗಳು, ರಾಧಾಕೃಷ್ಣನ್ ಅವರ ಜನ್ಮದಿನ, ಜನ್ಮಸ್ಥಳ, ತಂದೆ, ತಾಯಿ ಹಾಗೂ ಪತ್ನಿ, ವಿದ್ಯಾಭ್ಯಾಸ ಬಗೆಗೆ ವಿವರಣೆ,<br>2. ರಾಧಾಕೃಷ್ಣನ್ ಅವರ ವೃತ್ತಿ ಜೀವನ, ಬೋಧನಾ ಶೈಲಿ, ವ್ಯಕ್ತಿತ್ವದ ಬಗೆಗೆ ವಿವರಣೆ, ಮೈಸೂರಿನಲ್ಲಿ ವಿದ್ಯಾರ್ಥಿಗಳು ನೀಡಿದ ಭಾವಪೂರ್ಣ ಬೀಳ್ಕೊಡುಗೆ, ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತದ ಪ್ರತಿನಿಧಿಯಾಗಿ ಮಾಡಿದ ಉಪನ್ಯಾಸಗಳ ಪರಿಣಾಮ, ಕುರಿತು ಚರ್ಚೆ,<br>3. ಹಿಂದೂ ಧರ್ಮದ ಬಗೆಗೆ ರಾಧಾಕೃಷ್ಣನ್ ಅಭಿಪ್ರಾಯ, ರಾಧಾಕೃಷ್ಣನ್ ಅವರು ರಾಯಭಾರಿ, ಉಪರಾಷ್ಟ್ರಪತಿ, ರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಸಲ್ಲಿಸಿದ ಅನುಪಮ ಸೇವೆ ಕುರಿತು ವಿವರಣೆ,<br>4. ರಾಧಾಕೃಷ್ಣನ್ ಅವರಿಗೆ ದೊರೆತ ಪ್ರಶಸ್ತಿ, ಪುರಸ್ಕಾರಗಳು, ರಾಧಾಕೃಷ್ಣನ್ ರಚಿಸಿದ ಗ್ರಂಥಗಳ ಬಗೆಗೆ ವಿವರಣೆ.<br>5. ಕ್ರಿಯಾಪದದ ಕಾಲರೂಪಗಳ ಬಗೆಗೆ ವಿವರಣೆ ಧಾತು, ಕಾಲ ಸೂಚಕ ಪ್ರತ್ಯಯ, ಆಖ್ಯಾತ ಪ್ರತ್ಯಯ, ಪುರುಷಾರ್ಥಕ ಸರ್ವನಾಮ, ಲಿಂಗ ಹಾಗೂ ವಚನಗಳಿಗೆ ಅನುಗುಣವಾಗಿ ಉಂಟಾಗುವ ವಿವಿಧ ರೂಪಗಳು ಹಾಗೂ ಕಾಲಪಲ್ಲಟದ ಪರಿಚಯ. | * ಪಠ್ಯ ಪುಸ್ತಕ<br>* ಕೆ. ಎಸ್. ರತ್ನಮ್ಮ ಅವರ 'ಡಾ. ಎಸ್. ರಾಧಾಕೃಷನ್' ಕೃತಿ.<br>* ಎ. ಎನ್. ಮೂರ್ತಿ ರಾವ್ ಅವರ 'ಚಿತ್ರಗಳು – ಪತ್ರಗಳು' ಕೃತಿ.<br>* ಎ. ಎನ್. ಮೂರ್ತಿ ರಾವ್ ಅವರ ಭಾವಚಿತ್ರ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br>ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಮತ್ತು ರಾಧಾಕೃಷ್ಣನ್ ಅವರ ಭಾವಚಿತ್ರ<br>* ತಪಶೀಲು ಪಟ್ಟಿ<br>ಪ್ರಶ್ನೆಗಳ ಕಾರ್ಡ್‌ಗಳು<br>ಅವಲೋಕನ ತಪಶೀಲು ಪಟ್ಟಿ<br>ಮೂರು ಕಾಲರೂಪಗಳನ್ನು ತೋರಿಸುವ ಚಾರ್ಟ್ | 1. ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಆಡಿದ ಮಾತುಗಳಾವುವು?<br>2. ರಾಧಾಕೃಷ್ಣನ್ ಅವರ ತಂದೆ ತಾಯಿ ಹೆಸರೇನು?<br>3. ರಾಧಾಕೃಷ್ಣನ್ ಏನನ್ನು ಕಲಿಯಬೇಕೆಂದು ಅವರ ತಂದೆಯ ಅಪೇಕ್ಷೆ ಆಗಿತ್ತು?<br>4. ರಾಧಾಕೃಷ್ಣನ್ ಅವರು ಯಾವ ವಿಷಯದಲ್ಲಿ ಎಂ. ಎ. ಪದವಿ ಪಡೆದರು?<br>5. ರಾಧಾಕೃಷ್ಣನ್ ಅವರು ವಿದ್ಯಾರ್ಥಿಗಳನ್ನು ಹೇಗೆ ಬಹುಬೇಗ ಆಕರ್ಷಿಸುತ್ತಿದ್ದರು?<br>6. ಮೈಸೂರಿನಲ್ಲಿ ವಿದ್ಯಾರ್ಥಿಗಳು ರಾಧಾಕೃಷ್ಣನ್ ಅವರನ್ನು ಹೇಗೆ ಬೀಳ್ಕೊಟ್ಟರು?<br>7. ಹಿಂದೂ ಧರ್ಮದ ಬಗೆಗೆ ರಾಧಾಕೃಷ್ಣನ್ ಹೇಳಿದ ಮಾತುಗಳಾವುವು?<br>8. ಕ್ರಿಯಾಪದದ ಮೂಲರೂಪ ಯಾವುದು?<br>9. ಭೂತಕಾಲ / ವರ್ತಮಾನ / ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಯಾವುದು?<br>10. ಕಾಲ ಪಲ್ಲಟ ಎಂದರೇನು? |
| ಅನ್ವಯ ಚಟುವಟಿಕೆ | 1. ಶಿಕ್ಷಕರ ದಿನಾಚರಣೆಯ ಮಹತ್ವವನ್ನು ಕುರಿತು ಪ್ರಬಂಧ ಬರೆಯಿರಿ.<br>2. ನಿಮ್ಮ ಶಾಲೆಯಲ್ಲಿ ಆಚರಿಸಿದ ಶಿಕ್ಷಕರ ದಿನಾಚರಣೆ ಬಗೆಗೆ ತಿಳಿಸಿ ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ.<br>3. ರಾಧಾಕೃಷ್ಣನ್ ಅವರು ರಚಿಸಿದ ಕೃತಿಗಳ ಪಟ್ಟಿ | * ತಪಶೀಲು ಪಟ್ಟಿ<br>ಎಸ್, ರಾಧಾಕೃಷ್ಣನ್ ಅವರ ಜೀವನ ಮತ್ತು ಸಾಧನೆ ಲೇ. ಕೆ. ಎಸ್. ರತ್ನಮ್ಮ | 1. ಶಿಕ್ಷಕರ ದಿನಾಚರಣೆಯನ್ನು ಎಂದು ಆಚರಿಸಲಾಗುತ್ತದೆ? ಏಕೆ?<br>2. ರಾಧಾಕೃಷ್ಣನ್ ರಚಿಸಿದ ಕೃತಿಗಳನ್ನು ಹೆಸರಿಸಿ. |

| | | | |
|---|---|---|---|
| | ತಯಾರಿಸಿ. | | |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ ಘಟಕ – 8 9 ನೇ ತರಗತಿ**
**ಪದ್ಯ ಪಾಠ :– 4. ಸಿರಿಯನಿನ್ನೇನ ಬಣ್ಣಿಪೆನು ಕವಿ :– ರತ್ನಾಕರವರ್ಣಿ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :
ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ರತ್ನಾಕರವರ್ಣಿ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. ಕವಿಯು ಕಾವ್ಯವನ್ನು ಬರೆಯಲು ಕಾರಣವಾದ ಅಂಶಗಳನ್ನು ಗುರುತಿಸುವರು.
3. ಭರತನ ರಾಜವೈಭೋಗವನ್ನು ಕುರಿತು ವರ್ಣಿಸುವರು.
4. ಭರತನ ಆಸ್ಥಾನದ ವರ್ಣನೆಯನ್ನು ಆಸ್ವಾದಿಸುವರು.
5. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವರು.
6. ಸಾಂಗತ್ಯ ಪದ್ಯದ ಲಕ್ಷಣ ತಿಳಿಯುವರು.
7. ಅಕ್ಷರಗಣದ ವಿಧಗಳನ್ನು ಪರಿಚಯಿಸುವರು.
8. ಖ್ಯಾತ ಕರ್ನಾಟಕ ಪದ್ಯಗಳ ಲಕ್ಷಣ ಪರಿಚಯಿಸುವರು.
9. ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಭರತೇಶ ವೈಭವದ ಪೂರ್ವಕಥೆಯನ್ನು ಹೇಳುವುದು.<br>* ಭರತ – ಬಾಹುಬಲಿ ಅವರ ಯುದ್ಧಕ್ಕೆ ಕಾರಣವಾದ ಸಂದರ್ಭ ಕುರಿತು ಚರ್ಚಿಸುವರು.<br>* ಶ್ರವಣ ಬೆಳಗೊಳದ ಬಾಹುಬಲಿ ಮೂರ್ತಿ ಪರಿಚಯ ಮಾಡುವುದು. | ಭರತೇಶ ವೈಭವ ಹೊಸಗನ್ನಡ ಗದ್ಯಾನುವಾದ ಕೃತಿ<br><br>ತಪಶೀಲು ಪಟ್ಟಿ<br>ಭರತ – ಬಾಹುಬಲಿ ಚಿತ್ರ / ವೀಡಿಯೋ ಪ್ರದರ್ಶನ | 1. ಭರತನ ತಂದೆಯ ಹೆಸರೇನು?<br>2. ಭರತನು ಬಾಹುಬಲಿಯೊಡನೆ ಯುದ್ಧ ಮಾಡಲು ಕಾರಣವೇನು? |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿ ಶ್ರೀ ರತ್ನಾಕರವರ್ಣಿ ಅವರ ಪರಿಚಯ.<br>* ಪದವಿಂಗಡಿಸಿ ಉಪಾಧ್ಯಾಯರು ವಾಚನ, ಉಪಾಧ್ಯಾಯರನ್ನು ಅನುಸರಿಸಿ ವಿದ್ಯಾರ್ಥಿಗಳ ವಾಚನ, ಮೌನ ವಾಚನ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ | ಕವಿ ರತ್ನಾಕರವರ್ಣಿ ಅವರ ಭಾವಚಿತ್ರ<br><br>ತ. ಸು. ಶಾಮರಾವ್ ಅವರಿಂದ ಸಂಪಾದಿತ ಭರತೇಶ ವೈಭವ (ಆಕರ ಕೃತಿ)<br>ಪಠ್ಯ ಪುಸ್ತಕ<br><br>ನಿಘಂಟು (ರತ್ನಕೋಶ) | 1. ರತ್ನಾಕರವರ್ಣಿ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ರತ್ನಾಕರವರ್ಣಿ ಅವರ ಕೃತಿಗಳನ್ನು ಹೆಸರಿಸಿ.<br>3. ರತ್ನಾಕರವರ್ಣಿ ಅವರಿಗೆ ಇದ್ದ ಅಭಿಧಾನ ಯಾವುದು?<br>4. ರತ್ನಾಕರವರ್ಣಿ ಅವರ 'ಭರತೇಶ ವೈಭವ' ಕೃತಿಯನ್ನು ಸಂಪಾದಿಸಿ ರುವವರು ಯಾರು?<br>5. 'ಸಿರಿಯನಿನ್ನೇನ ಬಣ್ಣಿಪೆನು' ಕೃತಿಯ ಆಕರ ಕೃತಿ ಯಾವುದು? |

| | | | |
|---|---|---|---|
| | ಉಪಘಟಕಗಳು :–<br>1. ಕಾವ್ಯ ಆರಂಭದಲ್ಲಿ ಗುರುವಿನ ಧ್ಯಾನ, ತನ್ನ ಕೃತಿಯನ್ನು ಕನ್ನಡಿಗರು, ತೆಲುಗರು, ತುಳುವರು ಮೆಚ್ಚಬೇಕೆಂಬ ಅಭಿಲಾಷೆ.<br>2. ಭರತನ ರಾಜ್ಯದ, ಶೌರ್ಯದ ವರ್ಣನೆ.<br>3. ಭರತನು ಆಸ್ಥಾನಕ್ಕೆ ಬರುವ ರಾಜಠೀವಿಯ ವರ್ಣನೆ.<br>4. ಭರತನು ಸಿಂಹಾಸನದ ಮೇಲೆ ಕುಳಿತು ಶೃಂಗಾರ ದಿಂದ ಶೋಭಿಸುತ್ತಿದ್ದನು ಎಂಬ ವರ್ಣನೆ.<br>5. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು.<br>6. ಸಾಂಗತ್ಯದ ಲಕ್ಷಣದ ಪರಿಚಯ.<br>7. ಅಕ್ಷರ ಗಣದ ವಿಧಗಳ ಪರಿಚಯ.<br>8. ಖ್ಯಾತ ಕರ್ನಾಟಕ ವೃತ್ತಗಳ ಪರಿಚಯ. | ತಪಶೀಲು ಪಟ್ಟಿ<br><br>ಭರತನು ಸಿಂಹಾಸನದಲ್ಲಿ ಕುಳಿತ ಚಿತ್ರ<br><br>ತಪಶೀಲು ಪಟ್ಟಿ<br>ಅಕ್ಷರ ಗಣದ ವಿಧಗಳ ಚಾರ್ಟ್<br>ಖ್ಯಾತ ಕರ್ನಾಟಕ ವೃತ್ತಗಳ ಚಾರ್ಟ್ | 6. ಭರತೇಶ ವೈಭವ ಕೃತಿಯು ಯಾವ ಛಂದಸ್ಸಿನಲ್ಲಿ ರಚಿತವಾಗಿದೆ?<br>7. ರತ್ನಾಕರವರ್ಣಿಯು ಯಾರನ್ನು ಆದಿಯಾಗಿ ಮಾಡಿಕೊಂಡು ಕಾವ್ಯವನ್ನು ರಚಿಸಲು ಬಯಸುತ್ತಾನೆ?<br>8. ಭರತನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?<br>9. ಅಕ್ಷರ ಗಣದ ವಿಧಗಳನ್ನು ತಿಳಿಸಿ.<br>10. ಖ್ಯಾತ ಕರ್ನಾಟಕ ವೃತ್ತಗಳು ಯಾವುವು? ಹೆಸರಿಸಿ. |
| ಅನ್ವಯ ಚಟುವಟಿಕೆ | 1. ಪದ್ಯದ ಸಾರಾಂಶವನ್ನು ಹೇಳಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಕಂಠಪಾಠಕ್ಕೆ ನಿಗದಿಪಡಿಸಿರುವ ಭಾಗವನ್ನು ಹೇಳಿಸುವುದು.<br>4. ಪ್ರಸ್ತುತ ಪದ್ಯದಲ್ಲಿ ಬರುವ ಆದಿಪ್ರಾಸ ಪದಗಳನ್ನು ಪಟ್ಟಿ ಮಾಡಿಸುವುದು. | ತಪಶೀಲು ಪಟ್ಟಿ | 1. 'ಎಂಚಪೊರ್ಲಾಂಡು' ಪದದ ಅರ್ಥವೇನು?<br>2. 'ದಿವಿಜೇಂದ್ರ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                        ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ** **ಘಟಕ – 9.** **9 ನೇ ತರಗತಿ**
**ಗದ್ಯಪಾಠ :– 5. ಸಮಾಗಮ** **ಲೇಖಕರು :– ಸಂಪನ್ಮೂಲ ಸಂಪಾದನಾ ಸಮಿತಿ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :
ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಭಾಸ ಕವಿಯ ಬಗ್ಗೆ ಪರಿಚಯ ಮಾಡಿಕೊಳ್ಳುವರು ಹಾಗೂ ನಾಟಕದ ಆಶಯ ತಿಳಿಯುವರು.
2. ಕನ್ನಡ ನಾಟಕ ಪರಂಪರೆಯ ಬಗ್ಗೆ ಅರಿವು ಮೂಡಿಸಿಕೊಳ್ಳುವರು.
3. ನಾಟಕದಲ್ಲಿ ಬರುವ ಪಾತ್ರಗಳ ಪರಿಚಯ ಮಾಡುವರು.
4. ವಯಸ್ಸಿಗನಿಗೆ ಒದಗಿ ಬಂದ ದುರ್ಗತಿಯನ್ನು ವಿವರಿಸುವರು.
5. ಘಟೋತ್ಕಚನ ತಾಯಿಯ ಪಾರಣೆಗೆ ಹೋಗಲು ವಯಸ್ಸಿಗ ಹಾಗೂ ಅವನ ಹೆಂಡತಿ ಮಕ್ಕಳು ನಡೆಸಿದ ಸಂಭಾಷಣೆಯನ್ನು ಸಂಗ್ರಹಿಸುವರು.
6. ನಡುಮಗನು ಘಟೋತ್ಕಚನೊಡನೆ ಹೋಗಲು ನಿರ್ಧರಿಸಿದ ಸಂದರ್ಭವನ್ನು ಕುರಿತು ವಿಶ್ಲೇಷಿಸುವರು.
7. ಘಟೋತ್ಕಚನು 'ಮಧ್ಯಮ'ನನ್ನು ಕೂಗಿದ ಸಮಯದಲ್ಲಿ ನಡೆದ ಘಟನೆಯನ್ನು ವಿವರಿಸುವರು.
8. ಭೀಮ ಮತ್ತು ಘಟೋತ್ಕಚನ ನಡುವೆ ನಡೆದ ಯುದ್ಧವನ್ನು ವರ್ಣಿಸುವರು.
9. ಘಟೋತ್ಕಚ, ಭೀಮ ಮತ್ತು ಹಿಡಿಂಬೆಯ ಸಮಾಗಮವನ್ನು ಕುರಿತು ವಿವರಿಸುವರು.
10. ಹಳಗನ್ನಡದ ವಿಭಕ್ತಿ ಪ್ರತ್ಯಯಗಳನ್ನು ಪರಿಚಯ ಮಾಡಿಕೊಳ್ಳುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | 1. ವಿದ್ಯಾರ್ಥಿಗಳೊಡನೆ ಅವರ ಗ್ರಾಮದಲ್ಲಿ ನಡೆಯುವ ನಾಟಕಗಳನ್ನು ಕುರಿತು ಚರ್ಚೆ ನಡೆಸುವುದು.<br>2. ನಾಟಕ ಪ್ರಕಾರ ಬೆಳೆದು ಬಂದ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡುವುದು. | ನಾಟಕದ ಸಿ. ಡಿ. ಗಳು<br><br>ವಿಷಯ ಸಂಪದೀಕರಣ ಸಾಹಿತ್ಯ | 1. ಕನ್ನಡದ ಮೊದಲ ನಾಟಕ ಯಾವುದು?<br>2. ಪೌರಾಣಿಕ ನಾಟಕ ಎಂದರೇನು?<br>3. ಅನುವಾದಿತ ನಾಟಕ ಎಂದರೇನು? |
| ಕಲಿಕೆಯ ಚಟುವಟಿಕೆ | ಪ್ರಶ್ನೋತ್ತರ ವಿಧಾನದಿಂದ ಲೇಖಕರ ಪರಿಚಯ.<br>ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಸೂತ್ರಧಾರನ ಪ್ರವೇಶ, ದೇವತಾ ಪ್ರಾರ್ಥನೆ, ವಯಸ್ಸಿಗನ ಪ್ರವೇಶ, ವಯಸ್ಸಿಗನಿಗೆ ಒದಗಿ ಬಂದ ದುರ್ಗತಿ, ನಡುಮಗನಿಂದ ಘಟೋತ್ಕಚನ ದೇಹ ಸೌಂದರ್ಯದ ವರ್ಣನೆ, ಘಟೋತ್ಕಚನ ಪ್ರವೇಶ, ತನಗೆ ಒದಗಿ ಬಂದಿರುವ ಇಕ್ಕಟ್ಟಿನ ಪರಿಸ್ಥಿತಿಯ ವಿವರಣೆ,<br>2. ಘಟೋತ್ಕಚನಿಂದ ತಪ್ಪಿಸಿಕೊಳ್ಳಲು ವಯಸ್ಸಿಗನ ಚಿಂತೆ, ಕಾಡಿನಲ್ಲಿರುವ ಪಾಂಡವರ ಆಶ್ರಯ ದೊರೆಯಬಹುದೆಂಬ ನಂಬಿಕೆ. ಪಾಂಡವರು ಧೌಮ್ಯ ಮಹರ್ಷಿಯ ಬಳಿಗೆ ಹೋಗಿರುವ ವಿಷಯ ತಿಳಿದು | * ಭಾಸನ ನಾಟಕಗಳ ಕನ್ನಡ ಅನುವಾದಿತ ಕೃತಿಗಳು<br>* ಪಠ್ಯ ಪುಸ್ತಕ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br><br>* ತಪಶೀಲು ಪಟ್ಟಿ | 1. ಭಾಸನು ಯಾವ ಭಾಷೆಯ ನಾಟಕಕಾರ?<br>2. ಭಾಸನು ಜೀವಿಸಿದ್ದ ಕಾಲ ಯಾವುದು?<br>3. ಭಾಸನು ರಚಿಸಿದ ನಾಟಕಗಳನ್ನು ಹೆಸರಿಸಿ.<br>4. 'ಸಮಾಗಮ' ನಾಟಕಕ್ಕೆ ಆಧಾರವಾದ ಭಾಸನ ನಾಟಕ ಯಾವುದು?<br>5. ಸೂತ್ರಧಾರನು ಯಾವ ದೇವರನ್ನು ಪ್ರಾರ್ಥಿಸುತ್ತಾನೆ?<br>6. ವಯಸ್ಸಿಗನನ್ನು ಪೀಡಿಸುತ್ತಿದ್ದವನು ಯಾರು?<br>7. ಘಟೋತ್ಕಚನ ದೇಹ ಸೌಂದರ್ಯವನ್ನು ವರ್ಣಿಸುವವನು ಯಾರು?<br>8. ವಯಸ್ಸಿಗನಿಗೆ ' ಈ ಕಾಡಿನಲ್ಲಿ ರಾಕ್ಷಸರಿದ್ದಾರೆ, ಎಚ್ಚರಿಕೆಯಿಂದ ಹೋಗಬೇಕು' ಎಂದು ಹೇಳಿದ ಋಷಿ ಯಾರು? |

| | | | |
|---|---|---|---|
| | ನಿರಾಶೆ, ಭೀಮನು ಇರುವನೆಂಬ ವಿಷಯ ತಿಳಿದು ಸ್ವಲ್ಪ ಸಮಾಧಾನ. ಘಟೋತ್ಕಚನು ಹೇಳಿದ ಷರತ್ತಿಗೆ ಒಪ್ಪಿಗೆ, ಘಟೋತ್ಕಚನ ತಾಯಿಯ ಪಾರಣೆಗೆ ಹೋಗಲು ವಯಸ್ಸಿಗನ ಕುಟುಂಬದಲ್ಲಿ ಪರಸ್ಪರ ಚರ್ಚೆ, ಕೊನೆಗೆ ಯಾರಿಗೂ ಬೇಡವಾದ ನಡುಮಗನು ತನ್ನ ತ್ಯಾಗ ಮಾಡಲು ಒಪ್ಪಿಗೆ.<br>3. ಸ್ನಾನ ಮಾಡಲು ಹೋದ ನಡುಮಗನು ತುಂಬ ಸಮಯವಾದರೂ ಹಿಂದಿರುಗದಿದ್ದಾಗ ಘಟೋತ್ಕಚನು 'ಮಧ್ಯಮ' ಬೇಗ ಬಾ ಎಂದು ಕರೆಯುವುದು, ಮಧ್ಯಮ ಪಾಂಡವನಾದ ಭೀಮನ ಆಗಮನ, ವಯಸ್ಸಿಗನಿಂದ ತನಗೊದಗಿದ ವಿಪತ್ತಿನ ಬಗ್ಗೆ ವಿವರಣೆ, ಭೀಮನಿಂದ ರಕ್ಷಿಸುವ ಅಭಯ.<br>4. ಭೀಮ ಹಾಗೂ ಘಟೋತ್ಕಚರ ನಡುವೆ ನಡೆದ ವಾಗ್ವಾದ ಹಾಗೂ ಹೊಡೆದಾಟ, ಭೀಮನು ಕೊಟ್ಟ ಮಾತಿನಂತೆ ಘಟೋತ್ಕಚನೊಡನೆ ಪ್ರಯಾಣ, ಹಿಡಿಂಬೆ, ಭೀಮ ಮತ್ತು ಘಟೋತ್ಕಚರ ಸಮಾಗಮ<br>5. ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪರಿಚಯ | ಪ್ರಶ್ನೆಗಳ ಕಾರ್ಡ್‌ಗಳು<br>ಅವಲೋಕನ ತಪಶೀಲು ಪಟ್ಟಿ<br>ಭೀಮ ಮತ್ತು ಘಟೋತ್ಕಚರ ಚಿತ್ರ | 9. ಪಾಂಡವರು ಯಾರ ಆಶ್ರಮಕ್ಕೆ ಹೋಗಿದ್ದರು?<br>10. ಘಟೋತ್ಕಚನು ಹೇಳಿದ ಷರತ್ತು ಯಾವುದು?<br>11. ನಡುಮಗನು ಘಟೋತ್ಕಚನೊಡನೆ ಹೋಗಲು ತೀರ್ಮಾನಿಸಿದ್ದೇಕೆ?<br>12. ಘಟೋತ್ಕಚನು 'ಮಧ್ಯಮ' ಎಂದು ಕೂಗಿದಾಗ ಬಂದವರು ಯಾರು?<br>13. ಭೀಮನಿಗೆ 'ಮಧ್ಯಮ' ಎಂದು ಏಕೆ ಕರೆಯುತ್ತಾರೆ?<br>14. ಘಟೋತ್ಕಚನ ತಾಯಿಯ ಹೆಸರೇನು?<br>15. ಘಟೋತ್ಕಚನಿಗೆ ಭೀಮನು ತನ್ನ ತಂದೆ ಎಂದು ಯಾರಿಂದ ತಿಳಿಯಿತು?<br>16. ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ ಯಾವುದು? |
| ಅನ್ವಯ ಚಟುವಟಿಕೆ | 1. ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಲ್ಲಿ ತಂದೆ ಮಕ್ಕಳ ನಡುವೆ ನಡೆದ ಯುದ್ಧ ಪ್ರಸಂಗಗಳನ್ನು ಗುರುತಿಸಿ ಪಟ್ಟಿ ಮಾಡಿಸುವುದು.<br>2. 'ಸಮಾಗಮ' ನಾಟಕವನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಮಾಡಿಸುವುದು.<br>3. ಭೀಮ ಮತ್ತು ಘಟೋತ್ಕಚರ ನಡುವಿನ ಸಂಭಾಷಣೆಯನ್ನು ಬಳಸಿಕೊಂಡು ವಿದ್ಯಾರ್ಥಿಗಳಿಂದ ಏಕಪಾತ್ರಾಭಿನಯ ಮಾಡಿಸುವುದು. | ರಾಮಾಯಣ ಮತ್ತು ಮಹಾಭಾರತ ಕೃತಿಗಳು<br>* ತಪಶೀಲು ಪಟ್ಟಿ | 1. ರಾಮ ಮತ್ತು ಲವಕುಶರೊಡನೆ ಯುದ್ಧ ನಡೆಯಲು ಕಾರಣವೇನು?<br>2. ಅರ್ಜುನ ಮತ್ತು ಬಭ್ರುವಾಹನರೊಡನೆ ಯುದ್ಧ ನಡೆಯಲು ಕಾರಣವೇನು?<br>3. ಸಮಾಗಮ ನಾಟಕದಲ್ಲಿ ಬರುವ ಪಾತ್ರಗಳು ಯಾವುವು? |
| ಮೌಲ್ಯಮಾಪನ ಚಟುವಟಿಕೆ | 1. ಗುಂಪುಗಳಿಗೆ ಪ್ರಶ್ನೆಗಳ ಕಾರ್ಡ್‌ಗಳನ್ನು ನೀಡಿ, ಉತ್ತರ ಪಡೆಯುವುದು.<br>2. ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸುವಂತೆ ಸೂಚಿಸುವುದು.<br>3. ಅಭ್ಯಾಸ ಪುಸ್ತಕದ ಬರೆವಣಿಗೆ ಪರಿಶೀಲನೆ.<br>4. ಘಟಕ ಪರೀಕ್ಷೆ<br>5. ಪರಿಹಾರ ಬೋಧನೆ | ಪ್ರಶ್ನೆಗಳ ಕಾರ್ಡ್‌ಗಳು<br>* ತಪಶೀಲು ಪಟ್ಟಿ<br>ಅಭ್ಯಾಸ ಪುಸ್ತಕ<br>ಘಟಕ ಪರೀಕ್ಷೆ ಪ್ರಶ್ನೆ ಪತ್ರಿಕೆ | |

ಶಿಕ್ಷಕರ ಸಹಿ — ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ — ಘಟಕ – 10 — 9 ನೇ ತರಗತಿ**

**ಪದ್ಯ ಪಾಠ :– 5. ಸಾರ್ಥಕ ರಕ್ಷಣೆ — ಕವಿ :– ಶ್ರೀ ವಾದಿರಾಜರು ಹಾಗೂ ಶ್ರೀ ಶಿಶುನಾಳ ಶರೀಫರು**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ವಾದಿರಾಜರು ಹಾಗೂ ಸಂತ ಶಿಶುನಾಳ ಶರೀಫ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. 'ಭಗವಂತನು ಭಕ್ತವಜ್ರ ಪಂಜರ' ಎಂಬುದಕ್ಕೆ ವಾದಿರಾಜರು ನೀಡುವ ಉದಾಹರಣೆಗಳನ್ನು ಕುರಿತು ಚರ್ಚಿಸುವರು.
3. ಗಜೇಂದ್ರ ಮೋಕ್ಷ, ದ್ರೌಪದಿ ವಸ್ತ್ರಾಪಹರಣ, ಜಯದ್ರಥನ ಮೇಲಿನ ಅರ್ಜುನನ ವಿಜಯ, ಭಕ್ತ ಪ್ರಹ್ಲಾದ

ಹಾಗೂ ವಾದಿರಾಜ ಪ್ರಾಣ ರಕ್ಷಣೆ ಮೊದಲಾದ ಸನ್ನಿವೇಶಗಳಲ್ಲಿ ಭಗವಂತನ ಅನುಗ್ರಹ ದೊರೆತ ಬಗೆಗೆ ಅರಿಯುವರು.

4. ಬಿದಿರಿನಿಂದ ತಯಾರು ಮಾಡುವ ವಸ್ತುಗಳ ಪಟ್ಟಿ ಮಾಡುವರು.
5. ಬಿದಿರಿನ ವಸ್ತುಗಳ ಸಹಾಯ ಪಡೆಯುವವರನ್ನು ಹೆಸರಿಸುವರು.
6. 'ಬಿದಿರು ಸರ್ವರಿಗೂ ಉಪಕಾರಿಯಾದುದು' ಎಂಬ ಸಂದೇಶವನ್ನು ಅರಿಯುವರು.
7. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವರು.
8. ಸುಳಾದಿ ಮತ್ತು ತತ್ತ್ವಪದಗಳ ಲಕ್ಷಣ ತಿಳಿಯುವರು.
9. ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಬಸವಣ್ಣ, ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ ಅವರ ವಚನ ಹೇಳಿಸುವುದು.<br>* ಪುರಂದರದಾಸರ ಹಾಗೂ ಕನಕದಾಸರ ಕೀರ್ತನೆಗಳನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು.<br>* ವಾದಿರಾಜರ ಹಾಗೂ ಸಂತ ಶಿಶುನಾಳ ಶರೀಫ ಅವರ ಹಾಡುಗಳ ಧ್ವನಿಸುರುಳಿಯನ್ನು ಕೇಳಿಸುವುದು. | ಪುರಂದರದಾಸರ ಹಾಗೂ ಕನಕದಾಸರ ಕೀರ್ತನೆಗಳ ಸಂಗ್ರಹ.<br>* ವಾದಿರಾಜರ ಹಾಗೂ ಸಂತ ಶಿಶುನಾಳ ಶರೀಫ ಅವರ ಹಾಡುಗಳ ಧ್ವನಿಸುರುಳಿ ತಪಶೀಲು ಪಟ್ಟಿ | 1. ಬಸವಣ್ಣ ಅವರ ಅಂಕಿತ ಯಾವುದು?<br>2. ಅಲ್ಲಮಪ್ರಭು ಅವರ ಅಂಕಿತ ಯಾವುದು?<br>1. ಪುರಂದರದಾಸರ ಅಂಕಿತ ಯಾವುದು?<br>2. ಕನಕದಾಸರ ಅಂಕಿತ ಯಾವುದು |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿಗಳಾದ ಶ್ರೀ ವಾದಿರಾಜರ ಹಾಗೂ ಸಂತ ಶಿಶುನಾಳ ಶರೀಫ ಅವರ ಪರಿಚಯ.<br>* ಉಪಾಧ್ಯಾಯರಿಂದ ವಾಚನ, ಉಪಾಧ್ಯಾಯರನ್ನು ಅನುಸರಿಸಿ ವಿದ್ಯಾರ್ಥಿಗಳ ವಾಚನ, ಮೌನ ವಾಚನ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಗಜೇಂದ್ರ ಮೋಕ್ಷದ ಕಥೆ.<br>2. ದ್ರೌಪದಿ ವಸ್ತ್ರಾಪಹರಣದ ಕಥೆ.<br>3. ಜಯದ್ರಥ – ಅರ್ಜುನರ ಯುದ್ಧದ ಕಥೆ<br>4. ಭಕ್ತ ಪ್ರಹ್ಲಾದನ ಕಥೆ.<br>5. ಹಯವದನ ರೂಪಿ ಭಗವಂತನು ವಾದಿರಾಜರನ್ನು ರಕ್ಷಿಸಿದ ಕಥೆ.<br>6. ಬಿದಿರಿನ ಉಪಯೋಗಗಳು.<br>7. ಬಿದಿರಿನಿಂದ ತಯಾರಾಗುವ ವಸ್ತುಗಳು.<br>8. 'ಬಿದಿರು ಸರ್ವರಿಗೆ ಉಪಯೋಗವಾದುದು' ಎಂಬುದರ ಬಗ್ಗೆ ಚರ್ಚೆ<br>9. ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು.<br>10. ಸುಳಾದಿ ಮತ್ತು ತತ್ತ್ವಪದಗಳ ಲಕ್ಷಣ ತಿಳಿಯುವುದು. | ಕವಿ ವಾದಿರಾಜರ ಹಾಗೂ ಸಂತ ಶಿಶುನಾಳ ಶರೀಫ ಅವರ ಭಾವಚಿತ್ರ<br><br>ವಾದಿರಾಜರ ಹಾಡುಗಳು (ಆಕರ ಕೃತಿ)<br>ಶಿಶುನಾಳರ ಗೀತೆಗಳು (ಆಕರ ಕೃತಿ)<br><br>ಪಠ್ಯ ಪುಸ್ತಕ<br><br>ನಿಘಂಟು (ರತ್ನಕೋಶ)<br><br>ತಪಶೀಲು ಪಟ್ಟಿ<br>ಸಂಬಂಧಿತ ಕಥೆಗಳ ಚಿತ್ರ / ವೀಡಿಯೋ ಪ್ರದರ್ಶನ<br><br>ಬಿದಿರಿನಿಂದ ತಯಾರಾಗುವ ವಸ್ತುಗಳ ಚಿತ್ರಗಳ ಸಂಗ್ರಹ<br><br>ತಪಶೀಲು ಪಟ್ಟಿ | 1. ವಾದಿರಾಜ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶಿಶುನಾಳ ಶರೀಫ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>3. ಕುಂಜರ ಮೊರೆಯಿಡೆ ಬಂದೊದಗಿದವನು ಯಾರು?<br>4. ಕಂಜಾಕ್ಷಿಗೆ ಅಕ್ಷಯಾಂಬರವನ್ನು ಇತ್ತವನು ಯಾರು?<br>5. ಧನಂಜಯನನ್ನು ಕಾಪಾಡಿದವನು ಯಾರು?<br>6. ಭಕ್ತ ಪ್ರಹ್ಲಾದನ ತಂದೆಯ ಹೆಸರೇನು?<br>7. ವಿಷ್ಣುವಿಗೆ ನಂಜುಂಡ ಎಂದು ಹೆಸರು ಬರಲು ಕಾರಣವೇನು?<br>7. ಹಯವದನ ಎಂದರೆ ಯಾರು?<br>8. ಬಿದಿರಿನಿಂದ ತಯಾರಾಗುವ ವಸ್ತುಗಳ ಪಟ್ಟಿ ಮಾಡಿ.<br>9. ಬಿದಿರಿನಿಂದಾಗುವ ಉಪಯೋಗಗಳನ್ನು ತಿಳಿಸಿ.<br>10. ಸುಳಾದಿ ಲಕ್ಷಣವೇನು? |
| ಅನ್ವಯ ಚಟುವಟಿಕೆ | 1. ಪದ್ಯದ ಸಾರಾಂಶವನ್ನು ಹೇಳಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಕಂಠಪಾಠಕ್ಕೆ ನಿಗದಿಪಡಿಸಿರುವ ಭಾಗವನ್ನು | ತಪಶೀಲು ಪಟ್ಟಿ | 1. 'ಕುಂಜರ' ಪದದ ಅರ್ಥವೇನು?<br>2. 'ಕಂಜಾಕ್ಷಿ' ಎಂದರೆ ಯಾರು?<br>3. ಭಕ್ತವಜ್ರ ಪಂಜರ |


ಬಿ. ರವೀಶ್ ಕುಮಾರ್, ಕನ್ನಡ ಭಾಷಾ ಶಿಕ್ಷಕರು, ಸ. ಪ್ರೌ. ಶಾಲೆ, ಕೇರ್ಗಳ್ಳಿ –570026, ಮೈಸೂರು ತಾ॥ ಮತ್ತು ಜಿಲ್ಲೆ. ಸಂಚಾರಿ ವಾಣಿ ಸಂಖ್ಯೆ : 94489 58498

| | | | |
|---|---|---|---|
| | ಹೇಳಿಸುವುದು.<br>4. ಪದ್ಯವನ್ನು ರಾಗವಾಗಿ ಹಾಡಿಸುವುದು.<br>5. 'ನೀನಾರಿಗಾದೆಯೋ ಎಲೆ ಮಾನವಾ' – ಗೋವಿನ ಹಾಡನ್ನು ಹಾಡಿಸಿ, ಬಿದಿರು ಪದ್ಯಕ್ಕೆ ಹೋಲಿಕೆ ಮಾಡಿಸುವುದು. | 'ನೀನಾರಿಗಾದೆಯೋ ಎಲೆ ಮಾನವಾ' – ಗೋವಿನ ಹಾಡು ಧ್ವನಿಸುರುಳಿ | ಪದದಲ್ಲಿರುವ ಅಲಂಕಾರ ಯಾವುದು?<br>4. ಗೋವಿನಿಂದಾಗುವ ಪ್ರಯೋಜನಗಳೇನು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                                    ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ                ಘಟಕ – 11                9 ನೇ ತರಗತಿ**

**ಗದ್ಯಪಾಠ :– 6. ಹರಲೀಲೆ                                  ಕವಿ : ಹರಿಹರ**

ಪಾಠ ಬೋಧನೆಗೆ ಬೇಕಾದ ಅವಧಿಗಳು :                ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ಹರಿಹರ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. 'ನಂಬಿಯಣ್ಣನ ರಗಳೆ'ಯ ಪೂರ್ವಕಥೆಯನ್ನು ತಿಳಿಯುವರು.
3. ಪದ ವಿಂಗಡಿಸಿ ಓದುವ ಕ್ರಮವನ್ನು ಕಲಿಯುವರು.
3. ನಂಬಿಯಣ್ಣನು ಮಣಮಂದಪುತ್ತೂರಿನ ಹೊರವಲಯದ ಉದ್ಯಾನವನದಲ್ಲಿ ಕಂಡ ದೃಶ್ಯವನ್ನು ವರ್ಣಿಸುವರು.
4. ನಂಬಿಯಣ್ಣನ ಆನಂದಕ್ಕೆ ಕಾರಣವಾದ ಅಂಶಗಳನ್ನು ವಿವರಿಸುವರು.
5. ಶಿವನು ಕೈಲಾಸದಿಂದ ಭೂಲೋಕಕ್ಕೆ ಬರಲು ಕಾರಣವಾದ ಅಂಶವನ್ನು ವಿವರಿಸುವರು.
6. ಶಿವನ ಶತವೃದ್ಧ ರೂಪವನ್ನು ವರ್ಣಿಸುವರು.
7. ಶತವೃದ್ಧ ರೂಪಿ ಶಿವನು ಮದುವೆ ಮನೆಯಲ್ಲಿ ಮಾಡಿದ ಅವಾಂತರಗಳನ್ನು ವಿವರಿಸುವರು.
8. ಗದ್ಯಭಾಗದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವರು.
9. ಸವರ್ಣದೀರ್ಘ ಸಂಧಿ ಮತ್ತು ಅಂಶಿ ಸಮಾಸದ ಲಕ್ಷಣಗಳನ್ನು ತಿಳಿಯುವರು.
10 ರಗಳೆ ಛಂದಸ್ಸಿನ ಬಗ್ಗೆ ಅರಿವು ಮೂಡಿಸಿಕೊಳ್ಳುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ | * ನಡುಗನ್ನಡ ಕಾಲದ ಬಗ್ಗೆ ವಿವರಣೆ ನೀಡುವುದು. | ವಿಷಯ ಸಂಪದೀಕರಣ | 1. ನಡುಗನ್ನಡ ಕಾಲದ ಪ್ರಸಿದ್ಧ |

| | | | |
|---|---|---|---|
| ಚಟುವಟಿಕೆ | * ನಡುಗನ್ನಡ ಕಾಲದ ಕವಿಗಳು ಹಾಗೂ ಕಾವ್ಯಗಳನ್ನು ಪರಿಚಯ ಮಾಡುವುದು.<br>* ಹರಿಹರನ ಪುಷ್ಪರಗಳೆಯನ್ನು ಓದುವುದು. | ಸಾಹಿತ್ಯ<br><br>ಹರಿಹರನ ರಗಳೆಗಳು | ಕವಿಗಳನ್ನು ಹೆಸರಿಸಿ.<br>2. ನಡುಗನ್ನಡ ಕಾಲದಲ್ಲಿ ರಚಿತವಾದ ಪ್ರಸಿದ್ಧ ಕಾವ್ಯಗಳನ್ನು ಹೆಸರಿಸಿ. |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಲೇಖಕರಾದ ಶ್ರೀ ಹರಿಹರ ಅವರ ಪರಿಚಯ.<br>* ಪದವಿಂಗಡಣೆ ಮಾಡಿ ಉಪಾಧ್ಯಾಯರ ಓದು.<br>ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ರಚನೆ.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ.<br>ಉಪಘಟಕಗಳು :–<br>1. ನಂಬಿಯಣ್ಣನ ರಗಳೆಯ ಪೂರ್ವಕಥೆ, ಪುಷ್ಪದತ್ತನು ಭೂಲೋಕಕ್ಕೆ ಬರಲು ಕಾರಣವಾದ ಅಂಶಗಳು, ನಂಬಿಯಣ್ಣನ ಅವತಾರ, ಮದುವೆಯ ಸಂಭ್ರಮ.<br>2. ಮದುವೆ ಮನೆಗೆ ನಂಬಿಯಣ್ಣನ ಆಗಮನ, ಮಣಮಂದಪುತ್ತೂರಿನ ಉದ್ಯಾನವನದಲ್ಲಿ ಅನುಭವಿಸಿದ ಸಂತಸದ ಕ್ಷಣಗಳು.<br>3. ಕೈಲಾಸದಲ್ಲಿ ಶಿವ ಪಾರ್ವತಿಯರ ನಡುವೆ ನಡೆದ ಸಂವಾದ, ಪಾರ್ವತಿಯ ಬೇಡಿಕೆಗೆ ಶಿವನ ಒಪ್ಪಿಗೆ, ಶಿವನು ಶತವೃದ್ಧನ ರೂಪವನ್ನು ಧರಿಸುವುದು.<br>4. ಮದುವೆ ಮಂಟಪದ ಮುಂದೆ ಬಂದ ಶಿವನು ಶತವೃದ್ಧನಾಗಿ ನಿಂತ ರೂಪದ ವರ್ಣನೆ,<br>5. ವಿವಾಹ ಮಂಟಪದಲ್ಲಿ ಶತವೃದ್ಧ ರೂಪಿ ಶಿವನು ಮಾಡಿದ ಅವಾಂತರಗಳು, ಅಲ್ಲಿ ನೆರೆದಿದ್ದ ಜನರ ಆಡಿದ ಮಾತುಗಳು, ವಿವಾಹ ಮಂಟಪದಿಂದ ಹೊರ ಹಾಕಿದ್ದು.<br>6. ಗದ್ಯಭಾಗದಲ್ಲಿ ಕಂಡುಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು.<br>7. ಸವರ್ಣದೀರ್ಘ ಸಂಧಿಯ ನಿಯಮಗಳನ್ನು ಹಾಗೂ ಉದಾಹರಣೆಗಳನ್ನು ತಿಳಿಸುವುದು.<br>8. ಅಂಶಿ ಸಮಾಸದ ನಿಯಮಗಳನ್ನು ಹಾಗೂ ಉದಾಹರಣೆಗಳನ್ನು ತಿಳಿಸುವುದು.<br>9. ರಗಳೆಯ ಲಕ್ಷಣ ಹಾಗೂ ವಿಧಗಳನ್ನು ಉದಾಹರಣೆಗಳ ಸಹಿತ ವಿವರಿಸುವುದು. | * ಹರಿಹರ ಅವರ ಚಿತ್ರ<br>* ನಂಬಿಯಣ್ಣನ ರಗಳೆ (ಆಕರ ಕೃತಿ)<br>* ಪಠ್ಯ ಪುಸ್ತಕ<br><br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br><br>* ತಪಶೀಲು ಪಟ್ಟಿ<br><br>ಪ್ರಶ್ನೆಗಳ ಕಾರ್ಡ್‌ಗಳು<br><br>ಅವಲೋಕನ ತಪಶೀಲು ಪಟ್ಟಿ<br><br>* ಸವರ್ಣದೀರ್ಘ ಸಂಧಿಯ ನಿಯಮಗಳನ್ನು ಬರೆದ ಚಾರ್ಟ್.<br>* ಅಂಶಿ ಸಮಾಸದ ನಿಯಮಗಳನ್ನು ಬರೆದ ಚಾರ್ಟ್<br>* ರಗಳೆಯ ಲಕ್ಷಣ ಹಾಗೂ ವಿಧಗಳನ್ನು ಬರೆದ ಚಾರ್ಟ್ | 1. ಹರಿಹರ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಹರಿಹರ ಅವರು 'ರಗಳೆಯ ಕವಿ' ಪ್ರಸಿದ್ಧರಾಗಲು ಕಾರಣವೇನು?<br>3. ಹರಿಹರ ಅವರು ಬರೆದ ಕೃತಿಗಳನ್ನು ಪಟ್ಟಿಮಾಡಿ.<br>4. 'ಹರಲೀಲೆ' ಪದ್ಯದ ಆಕರ ಕೃತಿ ಯಾವುದು?<br>5. ನಂಬಿಯಣ್ಣನು ಮಣಮಂದಪುತ್ತೂರಿಗೆ ಮದುಮಗನಾಗಿ ಬಂದಾಗ ಏನೆಂದು ಬಿನ್ನವಿಸಲಾಯಿತು?<br>6. ನಂಬಿಯಣ್ಣನು ಉದ್ಯಾನವನದಲ್ಲಿ ಕಂಡ ದೃಶ್ಯವನ್ನು ವರ್ಣಿಸಿ.<br>7. ಶಿವನು ಕೈಲಾಸದಿಂದ ಭೂಲೋಕಕ್ಕೆ ಹೊರಡಲು ಕಾರಣವೇನು?<br>8. ಶಿವನು ಪಾರ್ವತಿಗೆ ಏನೆಂದು ಹೇಳಿದನು?<br>9. ಪಾರ್ವತಿ ಶಿವನನ್ನು ಏನೆಂದು ಕೇಳಿಕೊಂಡಳು?<br>10. ಶತವೃದ್ಧ ರೂಪಿ ಶಿವನು ಪಂಚಾಕ್ಷರಿ ಮಂತ್ರವನ್ನು ಹೇಗೆ ಹೇಳುತ್ತಿದ್ದನು?<br>11. ವಿವಾಹ ಮಂಟಪದಲ್ಲಿ ಶಿವನು ಮಾಡಿದ ಅವಾಂತರಗಳೇನು?<br>11. ಜನರು ಏನೆಂದು ಹೇಳಿದರು?<br>12. 'ಗುರೂಪದೇಶ' ಪದದಲ್ಲಿ ಆಗಿರುವ ಸಂಧಿ ಯಾವುದು?<br>13. 'ಮುಂದಲೆ' ಪದದಲ್ಲಿ ಆಗಿರುವ ಸಮಾಸ ಯಾವುದು?<br>14. ರಗಳೆಯ ವಿಧಗಳನ್ನು ಹೆಸರಿಸಿ. |
| ಅನ್ವಯ ಚಟುವಟಿಕೆ | * ಗದ್ಯಭಾಗವನ್ನು ಹೊಸಗನ್ನಡ ರೂಪದಲ್ಲಿ ಬರೆಯುವಂತೆ ಸೂಚಿಸುವುದು.<br>* ಗದ್ಯಭಾಗದಲ್ಲಿ ಬರುವ ಪದಗಳನ್ನು ವಿಗಂಡಿಸಿ ಬರೆಯುವಂತೆ ಸೂಚಿಸುವುದು. | * ತಪಶೀಲು ಪಟ್ಟಿ | 1. 'ಮುಯ್ಯಾನುತ' ಪದದ ಅರ್ಥವೇನು?<br>2. 'ಶಿಥಿಲಾಕ್ಷರ' ಪದದಲ್ಲಿ ಆಗಿರುವ ಸಂಧಿ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ |

| | | | |
|---|---|---|---|
| | * ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

**ಪ್ರಥಮ ಭಾಷೆ ಕನ್ನಡ ಘಟಕ – 12 9 ನೇ ತರಗತಿ**

**ಪದ್ಯ ಪಾಠ :– 6. ಕಾವ್ಯಸಂಗಮ(ಭಾಗ – 1) ಕವಿ :– ಶ್ರೀ ರಾಘವಾಂಕ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ರಾಘವಾಂಕ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. ಶ್ರೀ ರಾಘವಾಂಕ ವಿರಚಿತ 'ಹರಿಶ್ಚಂದ್ರ ಕಾವ್ಯ'ದ ಪೂರ್ವಕಥೆಯನ್ನು ಅರಿಯುವರು.
3. ಹರಿಶ್ಚಂದ್ರನು ತಡೆವೇಂಟೆಗೆ ಹೋಗಲು ಕಾರಣವಾದ ಅಂಶವನ್ನು ವಿವರಿಸುವರು.
4. ವಿಶ್ವಾಮಿತ್ರನು ಸೃಷ್ಟಿಸಿದ ಮಾಯಾವರಾಹದ ರೂಪವನ್ನು ವರ್ಣಿಸುವರು.
5. ಹರಿಶ್ಚಂದ್ರನು ಮಾಯಾವರಾಹವನ್ನು ಬೇಟೆಯಾಡಿದ ರೀತಿಯನ್ನು ತಿಳಿಯುವರು.
6. ಚಂದ್ರಮತಿಯು ಕನಸು ಕಂಡು ಭಯಗೊಂಡ ಹರಿಶ್ಚಂದ್ರನನ್ನು ಸಮಾಧಾನ ಪಡಿಸಿದ ರೀತಿಯನ್ನು ವಿವರಿಸುವರು.
7. ಹರಿಶ್ಚಂದ್ರನು ಕಂಡ ಕನಸಿನ ವಿವರಣೆಯನ್ನು ನೀಡುವರು.
8. 'ಕೇಡು ಬಂದರೆ ಬರಲಿ, ಸತ್ಯವನ್ನು ಬಿಟ್ಟು ಕೆಡಬೇಡ' ಎಂದು ಚಂದ್ರಮತಿ ಹೇಳಿದ ಮಾತನ್ನು ವಿಮರ್ಶಿಸುವರು.
9. ಕವನದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸುವರು.
10. ವಾರ್ಧಕ ಷಟ್ಪದಿಯ ಲಕ್ಷಣ ತಿಳಿಯುವರು.
11. ಪದ್ಯಗಳಲ್ಲಿ ಬರುವ ಆದಿಪ್ರಾಸ ಅಕ್ಷರಗಳನ್ನು ಗುರುತಿಸುವರು.
12. ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನ ಅನುಕೂಲಿಸುವ ಚಟುವಟಿಕೆ | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಸತ್ಯಹರಿಶ್ಚಂದ್ರನ ಕಥೆಯನ್ನು ಹೇಳುವುದು.<br>* ರಾಘವಾಂಕನ 'ಸತ್ಯವೆಂಬುದೇ ಹರ; ಹರನೆಂಬುದೇ ಸತ್ಯ' ಎಂಬ ಮಾತಿನ ಬಗ್ಗೆ ಚರ್ಚೆ. | ಹರಿಶ್ಚಂದ್ರ ಕಥಾ ಸಂಗ್ರಹ<br><br>ತಪಶೀಲು ಪಟ್ಟಿ | 'ಸತ್ಯವೆಂಬುದೇ ಹರ; ಹರನೆಂಬುದೇ ಸತ್ಯ' ಎಂದು ಹೇಳಿದವರು ಯಾರು? |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿಗಳಾದ ಶ್ರೀ ರಾಘವಾಂಕ ಅವರ ಪರಿಚಯ.<br>* ಉಪಾಧ್ಯಾಯರು ಪದವಿಗಂಡಿಸಿ ಪದ್ಯವನ್ನು ಓದುವುದು.<br>ಉಪಾಧ್ಯಾಯರನ್ನು ಅನುಸರಿಸಿ ವಿದ್ಯಾರ್ಥಿಗಳು ಪದವಿಂಗಡಿಸಿ ಪದ್ಯವನ್ನು ಓದುವುದು. ಮೌನ ಓದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ | ಕವಿ ರಾಘವಾಂಕ ಅವರ ಭಾವಚಿತ್ರ<br>ಹರಿಶ್ಚಂದ್ರ ಕಾವ್ಯ (ಆಕರ ಕೃತಿ)<br><br>ಪಠ್ಯ ಪುಸ್ತಕ | 1. ಶ್ರೀ ರಾಘವಾಂಕ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ರಾಘವಾಂಕ ಅವರ ಕೃತಿಗಳನ್ನು ಪಟ್ಟಿ ಮಾಡಿ.<br>3. ಶ್ರೀ ರಾಘವಾಂಕ ಅವರಿಗೆ ಸಂದ ಬಿರುದುಗಳನ್ನು ಹೆಸರಿಸಿ.<br>4. ಹರಿಶ್ಚಂದ್ರನು ಎಲ್ಲಿ |

| | | | |
|---|---|---|---|
| | ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಹರಿಶ್ಚಂದ್ರನು ತಡೆವೇಂಟೆಗೆ ಹೊರಡಲು ಕಾರಣವಾದ ಅಂಶಗಳು, ಬೇಟೆಗೆ ಹೊರಟ ರೀತಿ, ವಿಶ್ವಾಮಿತ್ರನಿಂದ ಸೃಷ್ಟಿಸಲ್ಪಟ್ಟ ಮಾಯಾವರಾಹದ ರೂಪ.<br>2. ಮಾಯಾವರಾಹವು ಬೇಡರ ಮೇಲೆ ಆಕ್ರಮಣ ಮಾಡಿದ ರೀತಿ, ಅದನ್ನು ಕೊಲ್ಲಲು ಹರಿಶ್ಚಂದ್ರನು ಸಿದ್ಧಗೊಂಡ ವಿಧಾನ, ಹರಿಶ್ಚಂದ್ರನು ಮಾಡಿದ ಪ್ರತಿಜ್ಞೆ.<br>3. ಹರಿಶ್ಚಂದ್ರನ ಬಾಣದಿಂದ ಗಾಯಗೊಂಡ ಮಾಯಾವರಾಹವು ಅನುಭವಿಸಿದ ಯಾತನೆ ಹಾಗೂ ಮರಳಿ ವನದೊಳಗೆ ಮರೆಯಾದ ರೀತಿ, ಮಾಯಾವರಾಹವನ್ನು ಹುಡುಕಿಕೊಂಡು ಹೋದ ಹರಿಶ್ಚಂದ್ರನು ಆಯಾಸಗೊಳ್ಳುವುದು.<br>4. ಆಯಾಸಗೊಂಡ ಹರಿಶ್ಚಂದ್ರನು ಕಂಡ ತಪೋವನದ ವರ್ಣನೆ, ಅದು ವಿಶ್ವಾಮಿತ್ರನಿಗೆ ಸೇರಿದ ವನ ಎಂದು ತಿಳಿದು ಭಯಗೊಳ್ಳುವುದು, ಸತಿ ಚಂದ್ರಮತಿಯ ಉಪಚಾರ.<br>5. ಕನಸನ್ನು ಕಂಡು ಬೆದರಿ ಎಚ್ಚರಗೊಂಡ ಹರಿಶ್ಚಂದ್ರನು ಗಾಬರಿಗೊಳ್ಳುವುದು, ಚಂದ್ರಮತಿಯಿಂದ ಹರಿಶ್ಚಂದ್ರನ ಸಾಮರ್ಥ್ಯದ ವರ್ಣನೆ ಸಮಾಧಾನದ ಮಾತುಗಳು.<br>6. ಹರಿಶ್ಚಂದ್ರನಿಂದ ಕಂಡ ಕನಸಿನ ವಿವರಣೆ, ಚಂದ್ರಮತಿಯು 'ಕೇಡು ಬಂದರೆ ಬರಲಿ, ಸತ್ಯವನ್ನು ಬಿಡಬೇಡ' ಎಂದು ಕೈಮುಗಿದು ಕೇಳಿಕೊಳ್ಳುವುದು.<br>7. ಪ್ರಸ್ತುತ ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು.<br>8. ಷಟ್ಪದಿಯ ಲಕ್ಷಣ ಹಾಗೂ ವಿಧಗಳು<br>9. ವಾರ್ಧಕ ಷಟ್ಪದಿಯ ಲಕ್ಷಣ ತಿಳಿಯುವುದು, ಆದಿ ಪ್ರಾಸಾಕ್ಷರಗಳನ್ನು ಗುರುತಿಸುವುದು. | ನಿಘಂಟು (ರತ್ನಕೋಶ)<br>ತಪಶೀಲು ಪಟ್ಟಿ<br>ತಪಶೀಲು ಪಟ್ಟಿ<br>ಷಟ್ಪದಿಯ ಲಕ್ಷಣ ಹಾಗೂ ವಿಧಗಳ ಚಾರ್ಟ್<br>ವಾರ್ಧಕ ಷಟ್ಪದಿಯ ಲಕ್ಷಣದ ಚಾರ್ಟ್ | ರಾಜ್ಯಭಾರ ಮಾಡುತ್ತಿದ್ದನು?<br>5. ಹರಿಶ್ಚಂದ್ರನು ಬೇಟೆಗೆ ಹೊರಡಲು ಕಾರಣವೇನು?<br>6. ಹರಿಶ್ಚಂದ್ರನು ಬೇಟೆಗೆ ಹೊರಡುವ ಮೊದಲು ಯಾರಿಗೆ ನಮಸ್ಕರಿಸಿದನು?<br>7. ಮಾಯಾವರಾಹವನ್ನು ಸೃಷ್ಟಿಸಿದವರು ಯಾರು?<br>8. ಹರಿಶ್ಚಂದ್ರನು ಏನೆಂದು ಪ್ರತಿಜ್ಞೆ ಮಾಡಿದನು?<br>9. ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಸೇರಿದ ವನದೊಳಗೆ ಪ್ರವೇಶಿಸಲು ಕಾರಣವೇನು?<br>10. ಹರಿಶ್ಚಂದ್ರನು ಭೋಂಕನೆ ನಿದ್ರೆಯಿಂದ ಮೇಲೇಳಲು ಕಾರಣವೇನು?<br>11. ಚಂದ್ರಮತಿಯು ಹರಿಶ್ಚಂದ್ರನ ಸಾಮರ್ಥ್ಯವನ್ನು ಕುರಿತು ಹೇಳಿದ ಮಾತುಗಳಾವುವು?<br>12. ಹರಿಶ್ಚಂದ್ರನು ಕನಸಿನಲ್ಲಿ ಏನನ್ನು ಕಂಡನು?<br>13. ಚಂದ್ರಮತಿಯು ಕೈಮುಗಿದು ಹರಿಶ್ಚಂದ್ರನನ್ನು ಏನೆಂದು ಬೇಡಿಕೊಂಡಳು?<br>14. ಷಟ್ಪದಿಯ ವಿಧಗಳು ಯಾವುವು?<br>15. ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸನ್ನು ಗುರುತಿಸಿ. |
| ಅನ್ವಯ ಚಟುವಟಿಕೆ | 1. ಪದ್ಯದ ಸಾರಾಂಶವನ್ನು ಹೇಳಿಸುವುದು.<br>2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಕಂಠಪಾಠಕ್ಕೆ ನಿಗದಿಪಡಿಸಿರುವ ಭಾಗವನ್ನು ಹೇಳಿಸುವುದು. | ತಪಶೀಲು ಪಟ್ಟಿ | 1. 'ಗರಳಗೊರಳ' ಎಂದರೆ ಯಾರು?<br>2. 'ಅರಳಸರಳ' ಎಂದರೆ ಯಾರು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

| | | | |
|---|---|---|---|
| | * ಘಟಕ ಪರೀಕ್ಷೆ | | |

ಶಿಕ್ಷಕರ ಸಹಿ                                        ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ**          **ಘಟಕ – 13**          **9 ನೇ ತರಗತಿ**

**ಗದ್ಯಪಾಠ :– 7. ಇತಿಹಾಸದ ಚಕ್ಕಡಿ**          **ಲೇಖಕರು : ಅರವಿಂದ ಮಾಲಗತ್ತಿ**

ಪಾಠ ಬೋಧನೆಗೆ ಬೇಕಾದ ಅವಧಿಗಳು :          ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :

1. ಶ್ರೀ ಅರವಿಂದ ಮಾಲಗತ್ತಿ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. ಆತ್ಮಚರಿತ್ರೆ ಮಹತ್ತ್ವ ಹಾಗೂ ಪ್ರಸಿದ್ಧ ವ್ಯಕ್ತಿಗಳ ಆತ್ಮಚರಿತೆ ಬಗ್ಗೆ ಅರಿಯುವುಮೂಡಿಸಿಕೊಳ್ಳುವರು.
3. ಅರವಿಂದ ಮಾಲಗತ್ತಿ ಅವರು ಬಾಲ್ಯದಲ್ಲಿ ಓದುತ್ತಿದ್ದ ರೀತಿ ಹಾಗೂ ಪ್ರಭಾವ ಬೀರಿದ ವ್ಯಕ್ತಿಯ ಬಗ್ಗೆ ತಿಳಿಯುವರು.
4. ಅರವಿಂದ ಮಾಲಗತ್ತಿ ಅವರಿಗೆ ಊರಿನ ಪದ್ಮಾವತಿ ಗುಡ್ಡದಲ್ಲಿ ಆದ ಅನುಭವವನ್ನು ವಿವರಿಸುವರು.
5. ಅರವಿಂದ ಮಾಲಗತ್ತಿ ಅವರು ಬಾಲ್ಯದಲ್ಲಿ ಪರೀಕ್ಷೆಗಾಗಿ ಓದಲು ಪಟ್ಟ ಬವಣೆಯನ್ನು ವಿವರಿಸುವರು.
6. ಅರವಿಂದ ಮಾಲಗತ್ತಿ ಅವರು ಬೀದಿ ಕಂಬದ ದೀಪ ಸರಿಡಿಸಲು ಪಂಚಾಯಿತಿಯನ್ನು ಭೇಟಿ ಮಾಡಿದ ಸಂದರ್ಭವನ್ನು ಕುರಿತು ವಿವರಿಸುವರು
7. ಅರವಿಂದ ಮಾಲಗತ್ತಿ ಅವರು ಬಾಲ್ಯಜೀವನದ ಸಂಘರ್ಷಗಳ ಬಗ್ಗೆ ಚರ್ಚೆ ನಡೆಸುವರು.
8. ಗದ್ಯಭಾಗದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡುವರು.
9. ವೃದ್ಧಿಸಂಧಿ, ಯಣ್ ಸಂಧಿ ಹಾಗೂ ದ್ವಂದ್ವ ಸಮಾಸಗಳ ನಿಯಮಗಳನ್ನು ಉದಾಹರಣೆಗಳೊಡನೆ ಅರ್ಥೈಸಿಕೊಳ್ಳುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಗಾಂಧೀಜಿ ಅವರ ಆತ್ಮಕತೆಯ ಒಂದು ಭಾಗವನ್ನು ವಾಚನ ಮಾಡುವುದು.<br>* ಆತ್ಮಚರಿತ್ರೆಯ ಲಕ್ಷಣ ಹಾಗೂ ಮಹತ್ತ್ವವನ್ನು ಕುರಿತು ಚರ್ಚೆ ನಡೆಸುವುದು.<br>* ಕನ್ನಡದಲ್ಲಿ ರಚಿತವಾದ ಪ್ರಮುಖ ಆತ್ಮಕಥೆಗಳ ಪಟ್ಟಿ ಮಾಡಿಸುವುದು. | ವಿಷಯ ಸಂಪದೀಕರಣ ಸಾಹಿತ್ಯ<br><br>* ತಪಶೀಲು ಪಟ್ಟಿ | 1. ಗಾಂಧೀಜಿ ಅವರ ಆತ್ಮಕತೆಯ ಹೆಸರೇನು?<br>2. ಆತ್ಮಕತೆ ಎಂದರೇನು?<br>3. ಕುವೆಂಪು ಅವರ ಆತ್ಮಕತೆಯ ಹೆಸರೇನು? |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಲೇಖಕರಾದ ಶ್ರೀ ಅರವಿಂದ ಮಾಲಗತ್ತಿ ಅವರ ಪರಿಚಯ.<br>* ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ರಚನೆ.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ.<br>ಉಪಘಟಕಗಳು :–<br>1. ಅರವಿಂದ ಮಾಲಗತ್ತಿ ಅವರು ಓದುತ್ತಿದ್ದ ವೇಳೆ, ಕೇರಿಯವರೊಡನೆ ಕದನ, ಓದಿನ ಆತ್ಮೀಯ ಸ್ಥಳ, ಇಟ್ಟಪ್ಪನ ಓದುವ ಹವ್ಯಾಸದಿಂದ ಲೇಖಕರ ಮೇಲೆ ಆದ ಪ್ರಭಾವ. | ಶ್ರೀ ಅರವಿಂದ ಮಾಲಗತ್ತಿ ಅವರ ಭಾವಚಿತ್ರ<br>ಶ್ರೀ ಅರವಿಂದ ಮಾಲಗತ್ತಿ ಅವರ ಸಾಕ್ಷ್ಯಚಿತ್ರದ ವೀಡಿಯೋ ಪ್ರದರ್ಶನ<br>ಗೌರ್ಮೆಂಟ್ ಬ್ರಾಹ್ಮಣ (ಆಕರ ಕೃತಿ)<br>* ಪಠ್ಯ ಪುಸ್ತಕ<br><br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ) | 1. ಅರವಿಂದ ಮಾಲಗತ್ತಿ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಅರವಿಂದ ಮಾಲಗತ್ತಿ ಅವರ ಕೃತಿಗಳನ್ನು ಹೆಸರಿಸಿ.<br>3. ಅರವಿಂದ ಮಾಲಗತ್ತಿ ಅವರಿಗೆ ಸಂದ ಪ್ರಶಸ್ತಿಗಳಾವುವು?<br>4. 'ಇತಿಹಾಸದ ಚಕ್ಕಡಿ' ಗದ್ಯಪಾಠದ ಆಕರ ಕೃತಿ ಯಾವುದು?<br>5. ಅರವಿಂದ ಮಾಲಗತ್ತಿ ಅವರು ಸಾಮಾನ್ಯವಾಗಿ ಯಾವ ಹೊತ್ತಿನಲ್ಲಿ ಓದುತ್ತಿದ್ದರು?<br>6. ಅರವಿಂದ ಮಾಲಗತ್ತಿ ಅವರಿಗೆ ಓದಲು |

| | | | |
|---|---|---|---|
| | 2. ಲೇಖಕರು ಕೇರಿಯ ಸ್ನೇಹಿತರಿಂದ ಗೇಲಿಗೆ ಒಳಗಾಗುತ್ತಿದ್ದುದು, ಪರೀಕ್ಷೆಗಳಲ್ಲಿ ಲೇಖಕರು ಉತ್ತೀರ್ಣರಾದದ್ದನ್ನು ಕಂಡು ಎಲ್ಲರು ಹಿಂಬಾಲಿಸಿದ್ದು, ಲೇಖಕರು ಪದ್ಮಾವತಿ ಗುಡ್ಡದಿಂದ ಭಯಗೊಂಡು ಓಡಿಬಂದದ್ದು, ಪರೀಕ್ಷಾ ಸಮಯದಲ್ಲಿ ಕೂದಲು ತೆಗೆಯಿಸಲು ಕಾರಣ, ಅದರ ಪರಿಣಾಮ<br>3. ಬೀದಿ ದೀಪದ ಕೆಳಗೆ ಕುಳಿತು ಓದುವ ರೂಢಿ ಮಾಡಿಕೊಂಡದ್ದು, ಬೀದಿದೀಪ ಕೆಟ್ಟು ಹೋದುದರಿಂದ ಪಂಚಾಯಿತಿಗೆ ದೂರು ನೀಡಿದ್ದು, ಪದೇಪದೇ ಬೀದಿ ದೀಪ ಕೆಟ್ಟು ಹೋದುದರಿಂದ ತೊಂದರೆಗೆ ಒಳಗಾದದ್ದು, ಚೇರಮನ್ನರ ಸಹಾಯದಿಂದ ದೀಪ ಬಂದದ್ದು. ಕವಿ ನೆಲದ ಮೇಲಿರುವುದಿಲ್ಲ ಪದ್ಯದ ವಿವರಣೆ.<br>4. ವೃದ್ಧಿ ಸಂಧಿ, ಯಣ್ ಸಂಧಿ ನಿಯಮಗಳನ್ನು ಉದಾಹರಣೆಗಳ ಮೂಲಕ ಅರ್ಥೈಸುವುದು.<br>5. ದ್ವಂದ್ವ ಸಮಾಸದ ನಿಯಮಗಳನ್ನು ಉದಾಹರಣೆಗಳ ಮೂಲಕ ಅರ್ಥೈಸುವುದು. | * ತಪಶೀಲು ಪಟ್ಟಿ<br><br>ಪ್ರಶ್ನೆಗಳ ಕಾರ್ಡ್‌ಗಳು<br><br>ಅವಲೋಕನ<br>ತಪಶೀಲು ಪಟ್ಟಿ<br><br>* ವೃದ್ಧಿ ಸಂಧಿ ಮತ್ತಿ ಯಣ್ ಸಂಧಿಗಳ ಸಂಧಿಯ ನಿಯಮವನ್ನು ಬರೆದ ಚಾರ್ಟ್.<br>* ದ್ವಂದ್ವ ಸಮಾಸದ ನಿಯಮಗಳನ್ನು ಬರೆದ ಚಾರ್ಟ್ | ಆತ್ಮೀಯವಾಗಿದ್ದ ಸ್ಥಳ ಯಾವುದು?<br>7. ಯಾರ ಓದುವ ಹವ್ಯಾಸ ಅರವಿಂದ ಮಾಲಗತ್ತಿ ಅವರ ಮೇಲೆ ಪ್ರಭಾವ ಬೀರಿತು?<br>8. ಕೇರಿಯ ಸ್ನೇಹಿತರು ಅರವಿಂದ ಮಾಲಗತ್ತಿ ಅವರನ್ನು ಏನೆಂದು ಹಂಗಿಸುತ್ತಿದ್ದರು?<br>9. ಅರವಿಂದ ಮಾಲಗತ್ತಿ ಅವರು ಎಲ್ಲಿ ಕುಳಿತು ಓದುವ ರೂಢಿ ಮಾಡಿಕೊಂಡಿದ್ದರು?<br>10. 'ಏಕೈಕ' ಪದದಲ್ಲಿ ಆಗಿರುವ ಸಂಧಿ ಯಾವುದು?<br>11. 'ಮರಗಿಡಬಳ್ಳಿಗಳ' ಪದದಲ್ಲಿ ಆಗಿರುವ ಸಮಾಸ ಯಾವುದು? |
| ಅನ್ವಯ ಚಟುವಟಿಕೆ | * ಕನ್ನಡ ಪ್ರಮುಖ ಆತ್ಮಕಥೆಗಳು ಹಾಗೂ ಲೇಖಕರ ಹೆಸರನ್ನು ಪಟ್ಟಿಮಾಡಿ.<br>* ನಿಮ್ಮ ಬಾಳಿನಲ್ಲಿ ಆಗಿರುವ ಎರಡು ಅನುಭವಗಳನ್ನು ಕುರಿತು ಬರೆಯಿರಿ.<br>* 'ಓದುವ ಹವ್ಯಾಸ' ಕುರಿತು ಪ್ರಬಂಧ ಬರೆಯಿರಿ.<br>* ದ್ವಂದ್ವ ಸಮಾಸಕ್ಕೆ ಹತ್ತು ಉದಾಹರಣೆಗಳನ್ನು ಬರೆಯಿರಿ. | * ತಪಶೀಲು ಪಟ್ಟಿ | |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ

**ಪದ್ಯ ಪಾಠ :– 6. ಕಾವ್ಯಸಂಗಮ(ಭಾಗ – 2)** **ಕವಿ :– ಶ್ರೀ ಸತ್ಯವಿಠಲ**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :
ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ಸತ್ಯವಿಠಲ ಬಿ. ವಿ. ಸತ್ಯನಾರಾಯಣರಾವ್ ಅವರ ಪರಿಚಯ ಮಾಡುವರು. ಪದ್ಯದ ಆಶಯ ತಿಳಿಯುವರು.
2. ಕನ್ನಡನಾಡಿನ ಹಿರಿಯ ಸಂಸ್ಕೃತಿಯ ಮಹತ್ತ್ವ ತಿಳಿಯುವರು.
3. ಕನ್ನಡನಾಡಿನ ಭೌಗೋಳಿಕ ವೈವಿಧ್ಯವನ್ನು ವರ್ಣಿಸುವರು.
4. ಕನ್ನಡನಾಡಿನ ಭವ್ಯ ಐತಿಹಾಸಿಕ ಪರಂಪರೆಯ ಬಗೆಗೆ ಅರಿಯುವರು.
5. ಕನ್ನಡ ನುಡಿಯ ಶ್ರೇಷ್ಠತೆಯನ್ನು ಕುರಿತು ವಿವರಿಸುವರು.
6. ಕವನದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸಿ, ವಿವರಿಸುವರು.
7. ಭಾಮಿನಿ ಷಟ್ಪದಿಯ ಲಕ್ಷಣ ತಿಳಿಯುವರು.
8. ಪದ್ಯಗಳಲ್ಲಿ ಬರುವ ಆದಿಪ್ರಾಸ ಅಕ್ಷರಗಳನ್ನು ಗುರುತಿಸುವರು.
9. ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ಕುವೆಂಪು ವಿರಚಿತ ಕನ್ನಡ ನಾಡ ಗೀತೆಯನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು.<br>* ಕನ್ನಡ ನಾಡಿನ ಭವ್ಯತೆಯನ್ನು ಸಾರುವ ಚಿತ್ರಗಳ ಪ್ರದರ್ಶನ ಮಾಡುವುದು.<br>* ಕನ್ನಡ ನಾಡಿನ ಪ್ರತಿಜಿಲ್ಲೆಯ ವೈಶಿಷ್ಟ್ಯವನ್ನು ಕುರಿತು ಚರ್ಚಿಸುವುದು. | ಕನ್ನಡ ನಾಡಗೀತೆ<br>ಕರ್ನಾಟಕ ಭೂಪಟ<br>ಕರ್ನಾಟಕದ ಭವ್ಯತೆ ಸಾರುವ ಚಿತ್ರಗಳು<br><br>ತಪಶೀಲು ಪಟ್ಟಿ | 1. 'ಸಕ್ಕರೆಯ ನಾಡು' ಎಂದು ಪ್ರಸಿದ್ಧವಾದ ಜಿಲ್ಲೆ ಯಾವುದು?<br>2. 'ಬೊಂಬೆಗಳ ನಾಡು' ಎಂದು ಪ್ರಸಿದ್ಧವಾದ ಜಿಲ್ಲೆ ಯಾವುದು?<br>3. ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ? |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಕವಿಗಳಾದ ಶ್ರೀ ಸತ್ಯವಿಠಲ ಅವರ ಪರಿಚಯ.<br>* ಉಪಾಧ್ಯಾಯರು ಪದವಿಂಗಡಿಸಿ ಪದ್ಯವನ್ನು ಓದುವುದು.<br>ಉಪಾಧ್ಯಾಯರನ್ನು ಅನುಸರಿಸಿ ವಿದ್ಯಾರ್ಥಿಗಳು ಪದವಿಂಗಡಿಸಿ ಪದ್ಯವನ್ನು ಓದುವುದು. ಮೌನ ಓದು.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ಮಾಡಿಸುವುದು.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ಕನ್ನಡನಾಡಿನ ಪರಂಪರೆ ಹಾಗೂ ಸಂಸ್ಕೃತಿಯನ್ನು ಪರಿಚಯಿಸುವುದು.<br>2. ಕನ್ನಡನಾಡಿನ ಭೌಗೋಳಿಕ ವೈವಿಧ್ಯವನ್ನು ಪರಿಚಯಿಸುವುದು.<br>3. ಕನ್ನಡನಾಡಿನ ಭವ್ಯ ಐತಿಹಾಸಿಕ ಪರಂಪರೆಯನ್ನು ಪರಿಚಯಿಸುವುದು.<br>4. ಕನ್ನಡ ನುಡಿಯ ಶ್ರೇಷ್ಠತೆಯನ್ನು ಪರಿಚಯಿಸುವುದು.<br>5. ಪ್ರಸ್ತುತ ಪದ್ಯದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವುದು.<br>6. ಭಾಮಿನಿ ಷಟ್ಪದಿಯ ಲಕ್ಷಣ ತಿಳಿಯುವುದು.,<br>7. ಆದಿಪ್ರಾಸಾಕ್ಷರಗಳನ್ನು ಗುರುತಿಸುವುದು. | ಕವಿ ಸತ್ಯವಿಠಲ ಅವರ ಭಾವಚಿತ್ರ<br><br>ಸಂಪೂರ್ಣ ದೇವೀ ಮಹಾತ್ಮೆ (ಆಕರ ಕೃತಿ)<br><br>ಪಠ್ಯ ಪುಸ್ತಕ<br><br>ನಿಘಂಟು (ರತ್ನಕೋಶ)<br><br>ತಪಶೀಲು ಪಟ್ಟಿ<br><br>ತಪಶೀಲು ಪಟ್ಟಿ<br>ಭಾಮಿನಿ ಷಟ್ಪದಿಯ ಲಕ್ಷಣದ ಚಾರ್ಟ್ | 1. ಕನ್ನಡನಾಡಿನ ತುಂಬ ಯಾವುದು ತುಂಬಿರುವುದು?<br>2. ಕನ್ನಡ ನುಡಿಯು ಕಿವಿಗೆ ಹೇಗೆ ಇರುತ್ತದೆ?<br>3. ಕಮಲಗಳು ಎಲ್ಲಿ ಅರಳುತ್ತವೆ?<br>4. ಕನ್ನಡನಾಡಿನಲ್ಲಿ ಹರಿವ ಪುಣ್ಯನದಿಗಳಾವುವು?<br>5. ಕನ್ನಡನಾಡಿನಲ್ಲಿ ಬಾಳಿ ಬದುಕಿದ ಸಂತರು ಯಾರು ಯಾರು?<br>6. ವೀರಗಲ್ಲು ಎಂದರೇನು?<br>7. ದಾನ ಶಾಸನಗಳು ಎಂದರೇನು?<br>8. ಕನ್ನಡನಾಡಿನ ಶಿಲ್ಪಕಲಾ ವೈಭವವನ್ನು ಎಲ್ಲೆಲ್ಲಿ ಕಾಣಬಹುದು?<br>9. ಕನ್ನಡ ನುಡಿಯು ಯಾವ ಪಕ್ಷಿಯ ಉಲಿಯಂತೆ ಇದೆ?<br>10. ಕನ್ನಡವು ಯಾವ ಪ್ರಾಣಿಯ ಗರ್ಜನೆಯಂತೆ ಇದೆ?<br>11. ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. |
| ಅನ್ವಯ | 1. ಪದ್ಯದ ಸಾರಾಂಶವನ್ನು ಹೇಳಿಸುವುದು. | | 1. ಕರ್ನಾಟಕ ರಾಜ್ಯದಲ್ಲಿರುವ |

| | | | |
|---|---|---|---|
| ಚಟುವಟಿಕೆ | 2. ಪದ್ಯದ ಸಾರಾಂಶವನ್ನು ಬರೆಯುವಂತೆ ತಿಳಿಸುವುದು.<br>3. ಕಂಠಪಾಠಕ್ಕೆ ನಿಗದಿಪಡಿಸಿರುವ ಭಾಗವನ್ನು ಹೇಳಿಸುವುದು.<br>4. ಕನ್ನಡನಾಡಿನಲ್ಲಿರುವ ಶಿಲ್ಪಕಲಾ ವೈಭವದಿಂದ ಕೂಡಿದ ದೇವಾಲಯಗಳ ಚಿತ್ರಗಳನ್ನು ಸಂಗ್ರಹಿಸಿರಿ.<br>5. ಕರ್ನಾಟಕದ ಭೂಪಟ ಬರೆದು, ನದಿಗಳನ್ನು ಗುರುತಿಸುವುದು. | ತಪಶೀಲು ಪಟ್ಟಿ<br><br>ಕರ್ನಾಟಕದ ಭೂಪಟ | ಜಿಲ್ಲೆಗಳ ಪಟ್ಟಿ ಮಾಡಿ.<br>2. ಕನ್ನಡನಾಡನ್ನು ಆಳಿದ ರಾಜಮನೆತನಗಳನ್ನು ಹೆಸರಿಸಿ.<br>3. ಕನ್ನಡನಾಡಿನ ಶರಣರು ಹಾಗೂ ದಾಸರುಗಳ ಚಿತ್ರಗಳನ್ನು ಸಂಗ್ರಹಿಸಿ. |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

**ಪ್ರಥಮ ಭಾಷೆ ಕನ್ನಡ ಘಟಕ – 15 9 ನೇ ತರಗತಿ**

**ಗದ್ಯಪಾಠ :– 8. ಅಚ್ಚರಿಯ ಜೀವಿ ಇಂಬಳ ಲೇಖಕರು : ಪಿ. ಸತ್ಯನಾರಾಯಣ ಭಟ್**

ಪಾಠ ಬೋಧನೆಗೆ ಬೇಕಾದ ಅವಧಿಗಳು : ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಶ್ರೀ ಪಿ. ಸತ್ಯನಾರಾಯಣ ಭಟ್ ಅವರ ಪರಿಚಯ ಮಾಡುವರು ಹಾಗೂ ಪಾಠದ ಆಶಯ ತಿಳಿಯುವರು.
2. ವೈಜ್ಞಾನಿಕ ಪ್ರಬಂಧಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವರು.
3. ಲೇಖಕರು ಇಂಬಳವನ್ನು ಮೊದಲು ನೋಡಿದ ಸಂದರ್ಭವನ್ನು ಕುರಿತು ವಿವರಿಸುವರು.
4. ಇಂಬಳದ ವೈಜ್ಞಾನಿಕ ಹೆಸರು ಹಾಗೂ ಜೀವನಕ್ರಮವನ್ನು ಕುರಿತು ವಿವರಿಸುವರು.
5. ಡಾ. ಕವಿತಾ ಅವರು ಮಂಡಿಸಿದ ಲೀಚ್ ಥೆರಪಿ ಚಿಕಿತ್ಸೆಯ ಬಗ್ಗೆ ಚರ್ಚಿಸುವರು.
6. ಇಂಬಳಗಳನ್ನು ಬಳಸಿ ಚಿಕಿತ್ಸೆ ನೀಡುವ ರೋಗಗಳನ್ನು ಪಟ್ಟಿ ಮಾಡುವರು.
7. ಇಂಬಳ ಕಡಿದಾಗ ನೋವಾಗದಿರುವುದಕ್ಕೆ ಕಾರಣ ತಿಳಿಸುವರು.
8. ಕಾಶ್ಮೀರದ ಕಾಝಿರ್ ಮೊಹಮ್ಮದ್ ಬಂಗೂ ಅವರ ಚಿಕಿತ್ಸಾ ವಿಧಾನದ ಬಗ್ಗೆ ವಿವರಿಸುವರು.
9. ಲೇಖಕರು ಇಂಬಳದ ಕಡಿತಕ್ಕೆ ಒಳಗಾದ ಸಂದರ್ಭವನ್ನು ಕುರಿತು ವಿವರಿಸುವರು.

10. ಪಠ್ಯಭಾಗದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವರು.
11. ಉದಾಹರಣೆಗಳ ಮೂಲಕ ಜಶ್ತ್ವ ಮತ್ತು ಶ್ಚುತ್ವ ಸಂಧಿಯ ಪರಿಚಯ ಮಾಡುವರು.
12. ಉದಾಹರಣೆಗಳ ಮೂಲಕ ಬಹುವ್ರೀಹಿ ಸಮಾಸ ಪರಿಚಯ ಮಾಡುವರು.
13. ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ವೈಜ್ಞಾನಿಕ ಲೇಖನದ ಬಗೆಗೆ ವಿವರಣೆ ನೀಡುವುದು.<br>* ಪತ್ರಿಕೆಯಲ್ಲಿ ಬರುವ ವೈಜ್ಞಾನಿಕ ಲೇಖನಗಳನ್ನು ಕುರಿತು ವಿವರಣೆ ನೀಡುವುದು.<br>* ಕನ್ನಡದ ಪ್ರಸಿದ್ಧ ವೈಜ್ಞಾನಿಕ ಲೇಖಕರ ಹೆಸರನ್ನು ಪಟ್ಟಿ ಮಾಡಿಸುವುದು. | ವಿಜ್ಞಾನ ಸಂಗಾತಿ ಪತ್ರಿಕೆ<br>ವರ್ತಮಾನ ಪತ್ರಿಕೆಗಳ ಸಂಗ್ರಹ | 1. ವೈಜ್ಞಾನಿಕ ಲೇಖನ ಎಂದರೇನು?<br>2. ಕನ್ನಡದ ಪ್ರಸಿದ್ಧ ವೈಜ್ಞಾನಿಕ ಲೇಖಕರನ್ನು ಹೆಸರಿಸಿ.<br>3. 'ವಿಜ್ಞಾನ ಪ್ರಪಂಚ' ಕೃತಿಯನ್ನು ಬರೆದವರು ಯಾರು? |
| ಕಲಿಕೆಯ ಚಟುವಟಿಕೆ | * ಪ್ರಶ್ನೋತ್ತರ ವಿಧಾನದಿಂದ ಲೇಖಕರಾದ ಶ್ರೀ ಪಿ. ಸತ್ಯನಾರಾಯಣ ಭಟ್ ಅವರ ಪರಿಚಯ.<br>* ಉಪಾಧ್ಯಾಯರ ಓದು.<br>ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು.<br>ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>ಹೊಸ ಪದಗಳನ್ನು ಬಳಸಿ, ಸ್ವಂತ ವಾಕ್ಯ ರಚನೆ.<br>ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ.<br>ಉಪಘಟಕಗಳು :–<br>1. ವರ್ಡ್ಸ್‌ವರ್ತ್ ಕವಿ ಹಾಗೂ ಲೀಚ್ ಗ್ಯಾದರರ್ ಅವರ ಮುಖಾಮುಖಿ. ಲೇಖಕರು ಮೊಟ್ಟಮೊದಲು 'ಇಂಬಳ' ಕಂಡದ್ದು, ಚಾರ್ಮಾಡಿ ಘಟ್ಟದಲ್ಲಿ ಚಾರಣಿಗರಿಗೆ ಆಗುವ ಅನುಭವ.<br>2. ಇಂಬಳದ ಜೀವನ ಕ್ರಮ, ಇಂಬಳದ ಬಗ್ಗೆ ಪರಿಸರ ವಿಜ್ಞಾನಿಗಳ ಅಭಿಪ್ರಾಯ, ವೈಜ್ಞಾನಿಕ ಹೆಸರನ್ನು ನೀಡಿದವನ ಪರಿಚಯ,<br>ವೈಜ್ಞಾನಿಕ ಹೆಸರು. ಲೀಚ್ ಥೆರಪಿ ವಿಧಾನದ ಪರಿಚಯ, ಇಂಬಳದಿಂದ ಚಿಕಿತ್ಸೆ ಮಾಡಬಹುದಾದ ಖಾಯಿಲೆಗಳು.<br>3. ಯುನಾನಿ ಮತ್ತು ಆಧುನಿಕ ವೈದ್ಯದಲ್ಲಿ ಲೀಚ್ ಥೆರಪಿಯ ಬಳಕೆ, ಇಂಬಳವು ರಕ್ತ ಹೀರುವ ವಿಧಾನ, ಲೀಚ್ ಸಾಕುವ ಹೊಸ ವ್ಯವಸಾಯ.<br>4. ಪಾಕಿಸ್ತಾನದಿಂದ ಜಿಗಣೆಯ ಆಮದು, ಕಾಶ್ಮೀರದ ಶ್ರೀನಗರ ಪುಟ್ಟಹಳ್ಳಿಯಲ್ಲಿ ಲೀಚ್ ಥೆರಪಿ ನೀಡುವ ವೈದ್ಯನ ಪರಿಚಯ, ಆಧುನಿಕ ಧನ್ವಂತರಿ ಕಾಯಿರ್ ಮೊಹಮದ್ ಬಂಗೂ ಎಂಬ ಹೆಮ್ಮೆಯ ಮಾತುಗಳು. ಲೇಖಕರಿಗೆ ದಾಂಡೇಲಿಯಲ್ಲಿ ಆದ ಅನುಭವ.<br>5. ಪಾಠದಲ್ಲಿ ಕಂಡುಬರುವ ಸರಳ ವ್ಯಾಕರಣಾಂಶಗಳ ಪರಿಚಯ.<br>6. ಉದಾಹರಣೆಗಳೊಡನೆ ಜಶ್ತ್ವ ಸಂಧಿಯ ನಿಯಮದ ಪರಿಚಯ.<br>7. ಉದಾಹರಣೆಗಳೊಡನೆ ಶ್ಚುತ್ವ ಸಂಧಿಯ ನಿಯಮದ ಪರಿಚಯ.<br>8. ಉದಾಹರಣೆಗಳೊಡನೆ ಬಹುವ್ರೀಹಿ ಸಮಾಸದ ಯಮದ ಪರಿಚಯ.<br>9. ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸುವುದು. | ಶ್ರೀ ಪಿ. ಸತ್ಯನಾರಾಯಣ ಭಟ್ ಅವರ ಭಾವಚಿತ್ರ<br>ಪೃಥವೀಸೂಕ್ತ (ಆಕರ ಕೃತಿ)<br>* ಪಠ್ಯ ಪುಸ್ತಕ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br>ಇಂಬಳದ ಛಾಯಾಚಿತ್ರ<br>* ತಪಶೀಲು ಪಟ್ಟಿ<br>ಜಿಗಣೆ ಚಿಕಿತ್ಸೆಯ ಛಾಯಾಚಿತ್ರಗಳು<br>ಪ್ರಶ್ನೆಗಳ ಕಾರ್ಡ್‌ಗಳು<br>ಅವಲೋಕನ ತಪಶೀಲು ಪಟ್ಟಿ<br>* ಜಶ್ತ್ವ ಮತ್ತು ಶ್ಚುತ್ವ ಸಂಧಿಗಳ | 1. ಶ್ರೀ ಪಿ. ಸತ್ಯ ನಾರಾಯಣ ಭಟ್ ಅವರ ಕಾಲ ಮತ್ತು ಸ್ಥಳ ತಿಳಿಸಿ.<br>2. ಶ್ರೀ ಪಿ. ಸತ್ಯ ನಾರಾಯಣ ಭಟ್ ಅವರ ಕೃತಿಗಳನ್ನು ಹೆಸರಿಸಿ.<br>3. 'ಅಚ್ಚರಿ ಜೀವಿ ಇಂಬಳ' ಗದ್ಯಪಾಠದ ಆಕರ ಕೃತಿ ಯಾವುದು?<br>4. ಲೀಚ್ ಗ್ಯಾದರರ್ ಕವಿತೆಯ ಕರ್ತೃ ಯಾರು?<br>5. ಲೇಖಕರು ಮೊದಲು ಇಂಬಳವನ್ನು ಕಂಡಿದ್ದು ಎಲ್ಲಿ?<br>6. ಇಂಬಳವನ್ನು ತುಳು ಭಾಷೆಯಲ್ಲಿ ಏನೆಂದು ಕರೆಯುವರು?<br>7. ಇಂಬಳಕ್ಕೆ ಪ್ರಪ್ರಥಮವಾಗಿ ವೈಜ್ಞಾನಿಕ ಹೆಸರನ್ನು ನೀಡಿದವರು ಯಾರು?<br>8. ಇಂಬಳದ ವೈಜ್ಞಾನಿಕ ಹೆಸರೇನು?<br>9. ಲೀಚ್ ಥೆರಪಿ ಎಂದರೇನು?<br>10. ಡಾ. ಕವಿತಾ ಅವರು ಯಾವ ಕಾಯಿಲೆಗೆ ಇಂಬಳದ ಚಿಕಿತ್ಸೆಯನ್ನು ನೀಡಿದರು?<br>11. ಯುನಾನಿ ವೈದ್ಯದ ಜನಕ ಯಾರು?<br>12. ಕಾಶ್ಮೀರದ ಶ್ರೀನಗರದ ಬಳಿಯಲ್ಲಿರುವ ಪುಟ್ಟಹಳ್ಳಿ ತೇಲಬಾಲ್‌ನಲ್ಲಿರುವ ಲೀಚ್ ಥೆರಪಿಸ್ಟನ ಹೆಸರೇನು?<br>13. 'ಷಡಾನನ' ಪದದಲ್ಲಿ ಆಗಿರುವ ಸಂಧಿ ಯಾವುದು?<br>14. 'ಜಗಜ್ಜ್ಯೋತಿ' ಪದದಲ್ಲಿ ಆಗಿರುವ ಸಂಧಿ ಯಾವುದು?<br>15. 'ಹಣೆಗಣ್ಣ' ಯಾವ ಸಮಾಸಕ್ಕೆ ಉದಾಹರಣೆ ಆಗಿದೆ? |

| | | | |
|---|---|---|---|
| | | ನಿಯಮಗಳನ್ನು ಬರೆದ ಚಾರ್ಟ್.<br><br>* ಬಹುವ್ರೀಹಿ ಸಮಾಸದ ನಿಯಮ ಬರೆದ ಚಾರ್ಟ್ | |
| ಅನ್ವಯ ಚಟುವಟಿಕೆ | * ಜಿಗಣೆ ಚಿಕಿತ್ಸೆ ಕುರಿತು ಪ್ರಬಂಧ ಬರೆಯಿರಿ.<br>* ಪತ್ರಿಕೆಯಲ್ಲಿ ಬರುವ ಒಂದು ವೈಜ್ಞಾನಿಕ ಲೇಖನವನ್ನು ಸಂಗ್ರಹಿಸಿ, ಓದಿರಿ.<br>* ಎರೆಹುಳುವಿನಿಂದಾಗುವ ಉಪಯೋಗ ತಿಳಿಸಿ ಪ್ರಬಂಧ ಬರೆಯಿರಿ. | * ತಪಶೀಲು ಪಟ್ಟಿ | 1. 'ಲೀಚ್ ಥೆರಪಿ' ಎಂದರೇನು? ವಿವರಿಸಿ.<br>2. ಯಾವಯಾವ ರೋಗಗಳಿಗೆ ಲೀಚ್ ಥೆರಪಿ ನೀಡುತ್ತಾರೆ? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

ಶಿಕ್ಷಕರ ಸಹಿ                                        ಮುಖ್ಯಶಿಕ್ಷಕರ ಸಹಿ

**ಪ್ರಥಮ ಭಾಷೆ ಕನ್ನಡ                ಘಟಕ – 16                9 ನೇ ತರಗತಿ**

**ಗದ್ಯಪಾಠ :– 9. ಜನಪದ ಕಲೆಗಳ ವೈಭವ                ಪಠ್ಯಪುಸ್ತಕ ಸಮಿತಿಯ ರಚನೆ**

ಪಾಠ ಬೋಧನೆಗೆ ಬೇಕಾದ ಅವಧಿಗಳು :                ಪ್ರಾರಂಭದ ದಿನಾಂಕ :

ಮುಕ್ತಾಯದ ದಿನಾಂಕ :

ಕಲಿಕಾಂಶಗಳು :
1. ಜನಪದ ಕಲೆಗಳ ಮಹತ್ತ್ವವನ್ನು ಅರಿಯುವರು ಹಾಗೂ ಪಾಠದ ಆಶಯ ತಿಳಿಯುವರು.
2. 'ವೀರಗಾಸೆ ಒಂದು ವೀರನೃತ್ಯ' ಎಂಬುದನ್ನು ಕುರಿತು ಚರ್ಚಿಸುವರು.
3. ವೀರಗಾಸೆ ನೃತ್ಯದ ಪರಿಚಯ ಮಾಡುವರು.
4. 'ಕಂಸಾಳೆ' ಒಂದು ಧಾರ್ಮಿಕ ಸಂಪ್ರದಾಯ ಎಂಬುದನ್ನು ಕುರಿತು ವಿವರಿಸುವರು.
5. 'ಕಂಸಾಳೆ' ಕಲಾತ್ಮಕತೆಯನ್ನು ಅರ್ಥೈಸುವರು.
6. 'ಯಕ್ಷಗಾನ' ಒಂದು ನೃತ್ಯಪ್ರಧಾನ ಕಲೆ ಎಂಬುದನ್ನು ವಿವರಿಸುವರು.
7. 'ಯಕ್ಷಗಾನ'ದ ಪಾತ್ರಗಳ ವೈಶಿಷ್ಟ್ಯವನ್ನು ತಿಳಿಸುವರು.
8. ಪಠ್ಯಭಾಗದಲ್ಲಿ ಬರುವ ಸರಳ ವ್ಯಾಕರಣಾಂಶಗಳನ್ನು ಗುರುತಿಸುವರು.
9. ಉದಾಹರಣೆಗಳೊಡನೆ ಅನುನಾಸಿಕ ಸಂಧಿ ಪರಿಚಯ ಮಾಡುವರು.
10. ಉದಾಹರಣೆಗಳೊಡನೆ ಕ್ರಿಯಾ ಮತ್ತು ಗಮಕ ಸಮಾಸಗಳನ್ನು ಪರಿಚಯ ಮಾಡುವರು.

| ಹಂತಗಳು | ಕಲಿಕೆಯನ್ನು ಅನುಕೂಲಿಸುವ ಚಟುವಟಿಕಗಳು | ಬಳಸುವ ಕಲಿಕಾ ಸಾಮಗ್ರಿಗಳು | ಮೌಲ್ಯಮಾಪನದ ಪ್ರಶ್ನೆಗಳು |
|---|---|---|---|
| ಪ್ರೇರಣಾ ಚಟುವಟಿಕೆ | * ವಿದ್ಯಾರ್ಥಿಗಳಿಂದ ಸ್ಥಳೀಯ ಜನಪದ ಕಲೆಗಳ ಪಟ್ಟಿ ಮಾಡಿಸುವುದು.<br>* ವಿದ್ಯಾರ್ಥಿಗಳಿಂದ ಜನಪದ ಆಟಗಳನ್ನು ಆಡಿಸುವುದು.<br>* ಮೈಸೂರು ದಸರಾ ಮೆರವಣಿಗೆಯಲ್ಲಿ ಸಾಗುವ ಜನಪದ ಕಲಾತಂಡಗಳ ಬಗೆಗೆ ಚರ್ಚಿಸುವುದು, ಪಟ್ಟಿ ಮಾಡಿಸುವುದು. | * ಮೈಸೂರು ದಸರಾ ಮೆರವಣಿಗೆ ವೀಡೀಯೋ.<br>* ವಿಷಯ ಸಂಪದೀಕರಣ ಸಾಹಿತ್ಯ | 1. ಜನಪದ ಕಲೆಗಳು ಯಾವುವು?<br>2. ನಿಮ್ಮ ಗ್ರಾಮದಲ್ಲಿ ಕಂಡುಬರುವ ಜನಪದ ಕಲೆಗಳು ಯಾವುವು?<br>3. ನಿಮ್ಮ ಊರಿನ ಪ್ರಸಿದ್ಧ ಜನಪದ ಕಲಾಕಾರರನ್ನು ಹೆಸರಿಸಿ. |
| ಕಲಿಕೆಯ | * ಪ್ರಶ್ನೋತ್ತರ / ಸಂದರ್ಶನ ವಿಧಾನದಿಂದ | * ಗೊ. ರು. ಚೆನ್ನಬಸಪ್ಪ ಅವರ | 1. 'ಜನಪದ ಕಲೆಗಳ ವೈಭವ' |

| | | | |
|---|---|---|---|
| ಚಟುವಟಿಕೆ | * ಜನಪದ ಕಲೆಗಳನ್ನು ಪರಿಚಯಿಸುವ ಚಟುವಟಿಕೆ.<br>* ಉಪಾಧ್ಯಾಯರು ಪಾಠವನ್ನು ಓದುವುದು.<br>* ಉಪಾಧ್ಯಾಯರ ಓದನ್ನು ಅನುಸರಿಸಿ ವಿದ್ಯಾರ್ಥಿಗಳು ಪಾಠವನ್ನು ಓದುವ ಚಟುವಟಿಕೆ.<br>* ನಿಘಂಟನ್ನು ಬಳಸಿಕೊಂಡು ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿಸುವ ಚಟುವಟಿಕೆ.<br>* ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದಿ, ಅರ್ಥೈಸಿಕೊಳ್ಳುವ ಚಟುವಟಿಕೆ.<br>* ವಿವರಣೆ – ಚರ್ಚೆ – ಪ್ರಶ್ನೋತ್ತರ ವಿಧಾನದಿಂದ ಪಾಠದ ಬೆಳವಣಿಗೆ<br>ಉಪಘಟಕಗಳು :–<br>1. ವೀರಗಾಸೆ ಶೈವ ಸಂಪ್ರದಾಯದ ಕುಣಿತ, ವೀರಗಾಸೆ ಕುಣಿತದಲ್ಲಿ ಬಳಸುವ ವಾದ್ಯಗಳು, ವೇಷಭೂಷಣಗಳು, ವೀರಗಾಸೆ ನರ್ತಕನು ಹೇಳುವ ಒಡಪು, ಕುಣಿತದ ಗತಿ, ವೀರಗಾಸೆ ಮತ್ತು ವೀರಭದ್ರನ ಕುಣಿತದ ನಡುವಿನ ವ್ಯತ್ಯಾಸ, ವೀರಗಾಸೆಗೆ ಇರುವ ಪ್ರಾದೇಶಿಕ ಹೆಸರುಗಳು, ವೀರಗಾಸೆ ನೃತ್ಯ ನಡೆಯುವ ಸಂದರ್ಭಗಳು.<br>2. ಕಂಸಾಳೆಯ ಪರಿಚಯ, ಕಂಸಾಳೆ ವೃತ್ತಿಗಾಯಕರು, ದೇವರಗುಡ್ಡರು ಕಂಸಾಳೆಗೆ ತೋರುವ ಗೌರವ, ಕಂಸಾಳೆಯ ವೈಶಿಷ್ಟ್ಯ, ಕಂಸಾಳೆ ಕಾರ್ಯಕ್ರಮ ನಡೆಯುವ ಸಂದರ್ಭಗಳು. ಕಂಸಾಳೆಯವರು ಹಾಡುವ ವಿಧಾನದ ಪರಿಚಯ, ಕಂಸಾಳೆಯವರು ಹಾಡುವ ಜನಪದ ಕಾವ್ಯಗಳು, ಕಂಸಾಳೆ ಕುಣಿತದ ವಿಧಗಳು.<br>3. ಡೊಳ್ಳು ಕುಣಿತ ಬೀರೇಶ್ವರ ಸಂಪ್ರದಾಯದ ಕುಣಿತ. ಡೊಳ್ಳು ಸಿದ್ಧಪಡಿಸುವ ವಿಧಾನ, ಕುಣಿಯುವ ವಿಧಾನ ಡೊಳ್ಳು ಕುಣಿತದವರ ವೇಷಭೂಷಣ, ಹೇಳುವ ಹಾಡುಗಳು, ಡೊಳ್ಳು ಕುಣಿತದ ವಿದಗಳು.<br>4. ಯಕ್ಷಗಾನ ಪ್ರಾದೇಶಿಕ ಪ್ರಭೇದಗಳು, ಯಕ್ಷಗಾನದ ಪಂಚ ಅಂಗಗಳು, ರಂಗಸ್ಥಳ ಸಿದ್ಧಪಡಿಸುವ ವಿಧಾನ, ಬಳಸುವ ವಾದ್ಯ ಪರಿಕರಗಳು, ಯಕ್ಷಗಾನದಲ್ಲಿ ಹಾಡು ಮತ್ತು ಕುಣಿತದ ವೈಶಿಷ್ಟ್ಯ, ಯಕ್ಷಗಾನ ಪ್ರಾರಂಭದಲ್ಲಿ ಬರುವ ಪಾತ್ರಗಳು, ವೇಷಭೂಷಣಗಳು, ಅಭಿನಯಿಸಲ್ಪಡುವ ಪ್ರಸಂಗಗಳು, ಹಾಸ್ಯಪಾತ್ರದ ಮಹತ್ವ, ರಾಕ್ಷಸ ಪಾತ್ರಗಳು ರಂಗಸ್ಥಳ ಪ್ರವೇಶಿಸುವ ರೀತಿ, ಯಕ್ಷಗಾನದಲ್ಲಿ ಭಾಗವತರ ಪ್ರಾಮುಖ್ಯ, ಯಕ್ಷಗಾನ ನೀಡುವ ಸಂದೇಶ.<br>5. ಅನುನಾಸಿಕ ಸಂಧಿಯ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು.<br>6. ಕ್ರಿಯಾ ಸಮಾಸದ ಮತ್ತು ಗಮಕ ಸಮಾಸದ ಲಕ್ಷಣವನ್ನು ಉದಾಹರಣೆಗಳ ಸಹಿತ ಪರಿಚಯಿಸುವುದು. | 'ಜನಪದ ಕಲೆಗಳು' ಕೃತಿ<br>* ಪಠ್ಯ ಪುಸ್ತಕ<br>* ಕನ್ನಡ–ಕನ್ನಡ ನಿಘಂಟು (ರತ್ನಕೋಶ)<br>* ವೀರಗಾಸೆ ಕುಣಿತದ ಚಿತ್ರ ಮತ್ತು ವೀಡಿಯೋ<br>* ಕಂಸಾಳೆ ಕುಣಿತದ ಚಿತ್ರ ಮತ್ತು ವೀಡಿಯೋ<br>* ಡೊಳ್ಳು ಕುಣಿತದ ಚಿತ್ರ ಮತ್ತು ವೀಡಿಯೋ<br>* ಯಕ್ಷಗಾನದ ಚಿತ್ರ ಮತ್ತು ವೀಡಿಯೋ | ಗದ್ಯಪಾಠದ ಆಕರ ಕೃತಿ ಯಾವುದು?<br>2. 'ರೋಮಾಂಚನ' ಪದದ ಅರ್ಥವೇನು?<br>3. 'ಲೋಕೋಕ್ತಿ' ಎಂದರೆ ಏನು?<br>4. ವೀರಗಾಸೆ ಕುಣಿತವು ಯಾವ ಸಂಪ್ರದಾಯಕ್ಕೆ ಸೇರಿದ ನೃತ್ಯವಾಗಿದೆ?<br>5. ವೀರಗಾಸೆ ಕುಣಿತದವರ ವೇಷಭೂಷಣ ಹೇಗಿರುತ್ತದೆ?<br>6. ವೀರಗಾಸೆ ಕುಣಿತಕ್ಕೆ ಸ್ಫೂರ್ತಿಯನ್ನು ನೀಡುವ ವಾದ್ಯಗಳಾವುವು?<br>7. ವೀರಭದ್ರನ ಕುಣಿತಕ್ಕೂ ವೀರಗಾಸೆ ಕುಣಿತಕ್ಕೂ ಇರುವ ವ್ಯತ್ಯಾಸವೇನು?<br>8. ಖಡ್ಗ ಅಥವಾ ಒಡುಪು ಎಂದರೆ ಏನು?<br>9. ಕಂಸಾಳೆಯು ಯಾವ ರೀತಿ ಇರುತ್ತದೆ?<br>10. ಕಂಸಾಳೆಯವರಿಗೆ ಸಲ್ಲಿಸುವ ಕಾಣಿಕೆಯು ಯಾರಿಗೆ ಸಮರ್ಪಿತವಾದಂತೆ ಎಂಬ ನಂಬಿಕೆ ಇದೆ?<br>11. ದೇವರಗುಡ್ಡರ ವಿಶಿಷ್ಟ ನೃತ್ಯ ಯಾವುದು?<br>12. ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ?<br>13. ಡೊಳ್ಳು ಬಾರಿಸುವವರ ವೇಷಭೂಷಣ ಹೇಗಿರುತ್ತದೆ?<br>14. ಯಕ್ಷಗಾನಕ್ಕೆ ಇರುವ ಬೇರೆಬೇರೆ ಹೆಸರುಗಳು ಯಾವುವು?<br>15. ಯಕ್ಷಗಾನವನ್ನು ಕಲಿಸುವವನಿಗೆ ಏನೆಂದು ಕರೆಯುತ್ತಾರೆ?<br>16. ಮೊದಲು ಚೌಕಿಯಲ್ಲಿ ಯಾವ ಪೂಜೆಯು ನಡೆಯುತ್ತದೆ?<br>17. ಯಕ್ಷಗಾನದಲ್ಲಿ ರಾಕ್ಷಸ ಪಾತ್ರಗಳ ಪ್ರವೇಶವು ಹೇಗಿರುತ್ತದೆ?<br>18. ಕ್ರಿಯಾ ಸಮಾಸ ಎಂದರೇನು?<br>19. ಗಮಕ ಸಮಾಸ ಒಂದು ಉದಾಹರಣೆ ಕೊಡಿ. |
| ಅನ್ವಯ ಚಟುವಟಿಕೆ | 1. ನಿಮ್ಮ ಊರಿನಲ್ಲಿರುವ ಜನಪದ ಕಲೆಗಳನ್ನು ಪರಿಚಯಿಸಿ ಪ್ರಬಂಧ ಬರೆಯಿರಿ.<br>2. ಜನಪದ ಒಗಟುಗಳನ್ನು ಸಂಗ್ರಹಿಸಿ ಓದಿರಿ. | * ಪಠ್ಯಪುಸ್ತಕ | 1. 'ಅತ್ಯಪೂರ್ವ' ಪದದಲ್ಲಿ ಆಗಿರುವ ಸಂಧಿ ಯಾವುದು?<br>2. 'ಕಂಸಾಳೆ' ಪದದ ತತ್ಸಮ |

| | | | |
|---|---|---|---|
| | 3. ಜನಪದ ಗಾದೆಗಳನ್ನು ಸಂಗ್ರಹಿಸಿ ಓದಿರಿ.<br>4. ಪಾಠದಲ್ಲಿರುವ ಸರಳ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿರಿ. | | ರೂಪ ಯಾವುದು? |
| ಮೌಲ್ಯಮಾಪನ ಚಟುವಟಿಕೆ | * ಹಿಮ್ಮಾಹಿತಿ<br>* ಗೃಹಪಾಠ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಚಟುವಟಿಕೆಗಳು<br>* ಘಟಕ ಪರೀಕ್ಷೆ | * ಪ್ರಶ್ನಾವಳಿ<br>* ಪ್ರಶ್ನಾವಳಿ<br>* ಪಠ್ಯಪುಸ್ತಕ<br>* ಮಾಹಿತಿ ಸಂಗ್ರಹ<br>* ಪ್ರಶ್ನಾವಳಿ | * ಮೌಖಿಕ ಪರೀಕ್ಷೆ<br>* ಅವಲೋಕನ<br>* ಅವಲೋಕನ<br>* ಅವಲೋಕನ<br>* ಲಿಖಿತ ಪರೀಕ್ಷೆ |

**ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**